# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**
ನ್ಯಾಯಯುತವಾಗಿ ಧರ್ಮಮಾರ್ಗದಲ್ಲಿ ನಡೆಯುವ ವ್ಯಕ್ತಿಯ ಸೂಕ್ಷ್ಮ ಮನಸ್ಸು ಶಾಂತವಾಗಿರುತ್ತದೆ. ಆ ವ್ಯಕ್ತಿ ನೆಮ್ಮದಿಯ ಬದುಕನ್ನು ಕಾಣುತ್ತಾನೆ.. ಅಧರ್ಮದ ದಾರಿಯಲ್ಲಿ ನಡೆದೂ, ಸನ್ಮಾನಕ್ಕೆ ಒಳಗಾಗುವವನ ಮನಸ್ಸು ಗೊಂದಲಕ್ಕೀಡಾಗುತ್ತದೆ ಅವನು ಸುಖಮಯ ಜೀವನ ನಡೆಸಲು ಸಾಧ್ಯವಿಲ್ಲ.. ಅನೇಕ ಪಾಪಕರ್ಮಗಳನ್ನು ಹೊತ್ತುಕೊಂಡು ವೃತ್ತಿಯಲ್ಲಿ ಜನಿಸಿದರೂ, ಆತನ ನಡತೆಯಿಂದ ಮತ್ತು ಆತ ಮಾಡುವ ಉತ್ತಮ ಕಾರ್ಯಗಳಿಂದ ಆತನ ಪಾಪ ಕುಕೃತ್ಯಗಳನ್ನು ಅಳಿಯಲಾಗುತ್ತದೆ..
**ಭಗವಾನ್ ಶ್ರೀಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 06-06-2025 to 12-06-2025 ಬೆಲೆ: 7-00 ಸಂಪುಟ–4 ಸಂಚಿಕೆ–50 ಪುಟಗಳು–6

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು






ಮಾನವ ತನ್ನ ಸ್ವಂತ ತಪ್ಪಿನಿಂದ ಹಲವಾರು ಅನಾಹುತಗಳಿಗೆ ಕಾರಣನಾಗುತ್ತಿದ್ದಾನೆ. ಅದಕ್ಕೆ ಉದಾಹರಣೆ ಎಂಬಂತೆ ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ಗುಡ್ಡ ಕುಸಿತಗಳು ಸಂಭವಿಸಿ ಹಲವಾರು ಅನಾಹುತಗಳು ನಡೆಯುತ್ತಿದೆ. ಅಭಿವೃದ್ಧಿ ಹಸರಿನಲ್ಲಿ ನಡೆಯುವ ಕಾಮಗಾರಿಗಳು ಕೂಡ ಇಂತಹ ಅನಾಹುತಗಳಿಗೆ ಮಾಡಿಕೊಡುತ್ತಿದೆ ಎನ್ನುವುದು ಜನ ಸಾಮಾನ್ಯನ ಅಳಲು. ಹಾಗಾಗಿ ಅಬಿವೃದ್ಧಿ ಕಾಮಗಾರಿಗಳು ನಡೆಯುವಾಗ ಅದರ ಸಾಧಕ ಭಾದಕಗಳ ಬಗ್ಗೆ ಪರಿಶೀಲಿಸಿ ಮುಂದುವರಿಯುವುದು ಉತ್ತಮ.

## ಹುಚ್ಚು ಅಭಿಮಾನಕ್ಕೆ ಬಡಜೀವಗಳು ಬಲಿ..!



**ಬೆಂಗಳೂರು:** ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡ 18 ವರ್ಷಗಳ ನಂತರ ಗೆಲುವು ಸಾದಿಸಿ, ಕನ್ನಡಿಗರು ಹುಚ್ಚೆದ್ದು ಕುಣಿಯುವಂತೆ ಮಾಡಿದ್ದು ಸತ್ಯ. ರಾಜ್ಯ ಸರ್ಕಾರದಿಂದ ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ ಅಭಿನಂದನಾ ಕಾರ್ಯಕ್ರಮ ವೀಕ್ಷಿಸಲು ಜನಸಾಗರವೇ ನೆರೆದಿತ್ತು. ಮಳೆ ಬಂದ ಕಾರಣ ಸನ್ಮಾನ ಕಾರ್ಯಕ್ರಮವನ್ನು ತರಾತುರಿಯಲ್ಲಿ ಮುಗಿಸಲಾಯಿತು. ಇನ್ನೊಂದೆಡೆ, ಅಂದಾಜಿಗಿಂತ ಹೆಚ್ಚು ಜನರು ಆಗಮಿಸಿದ್ದರಿಂದ ಜನದಟ್ಟಣೆ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಈ **3ನೇ ಪುಟಕ್ಕೆ**

## ದ.ಕ ಜಿಲ್ಲೆಯಲ್ಲಿ ಯಾರೂ ಆತಂಕ ಪಡಬೇಕಿಲ್ಲ –ಡಾ. ಜಿ ಪರಮೇಶ್ವರ್




**ಬೆಂಗಳೂರು:** ಕರಾವಳಿಯಲ್ಲಿ ನಾವು ಯಾರನ್ನೂ ಗುರಿ ಮಾಡುವುದಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರೂ ಆತಂಕ ಪಡಬೇಕಿಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಹೇಳಿದ್ದಾರೆ. ಹಿಂದೂ ಪರ ಸಂಘಟನೆಗಳ ಸದಸ್ಯರಿಗೆ ಪೊಲೀಸರು ಕಿರುಕುಳ ನೀಡುತ್ತಿದ್ದಾರೆಂಬ ಬಿಜೆಪಿ ಆರೋಪ ಕುರಿತು ಪ್ರತಿಕ್ರಿಯೆ ನೀಡಿ ಮಾತನಾಡಿದ ಅವರು, ನಾವು ಯಾರನ್ನು ಗುರಿ ಮಾಡುವುದಿಲ್ಲ. ನೀವು ಸಾರ್ವಜನಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಡೆದುಕೊಳ್ಳುವುದಾದರೆ ಭಯ ಏಕೆ? ಯಾರು ಕಾನೂನು ಬಿಟ್ಟು ಕೆಲಸ ಮಾಡುತ್ತಾರೆ ಅಂತವರಿಗೆ ಭಯ ಆಗಬೇಕು ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರು ಆತಂಕ ಪಡಬೇಕಿಲ್ಲ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾರು ಕಾನೂನು ಮತ್ತು ಜನ ಸಮುದಾಯಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ ಅವರಿಗೆ ಆತಂಕವಿರಬಹುದು. ಅದನ್ನು ಬಿಟ್ಟರೆ ಸಾಮಾನ್ಯ ಜನರಿಗೆ **3ನೇ ಪುಟಕ್ಕೆ**

## ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಿಸಬೇಡಿ –ಭಂಡಾರಿ



**ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯ ಜನರು ಸುಶಿಕ್ಷಿತರು, ಬುದ್ಧಿಜೀವಿಗಳು. ಕೆಲವೇ ಕೆಲವು ಜನರಿಂದ ಈ ಜಿಲ್ಲೆಯ ಘನತೆಗೆ ಚ್ಯುತಿ ತರುವ ಪ್ರಯತ್ನವಾಗುತ್ತಿದೆ. ಇದನ್ನು ಮಟ್ಟಹಾಕಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಪ್ರಯತ್ನಪಡುವ ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಇದು ಖಂಡನೀಯ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಶೇ.99 **3ನೇ ಪುಟಕ್ಕೆ**






# ಸಂಪ್ರದಾಯ

## ಗಜನ್ ನೃತ್ಯ




ಚೈತ್ರ ಮಾಸದ ಕೊನೆಯ ದಿನದಂದು ಆಚರಿಸಲಾಗುವ ಗಜನ್ ನೃತ್ಯವು ತ್ರಿಪುರಾದ ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. ಈ ನೃತ್ಯದಲ್ಲಿ ಜನರು ಶಿವ ಮತ್ತು ಗೌರಿ ದೇವತೆಗಳ ವೇಷವನ್ನು ಧರಿಸುತ್ತಾರೆ. ನರ್ತಕರು ಮನೆ ಮನೆಗೆ ತೆರಳಿ ನೃತ್ಯ ಮಾಡಿ ಅಕ್ಕಿ ಮತ್ತು ಹಣವನ್ನು ಸಂಗ್ರಹಿಸುತ್ತಾರೆ. ತ್ರಿಪುರಾದಲ್ಲಿ ಬಂಗಾಳಿ ಸಮುದಾಯದವರು ಗಜನ್ ಹಬ್ಬವನ್ನು ಆಚರಿಸುತ್ತಾರೆ. ಹೊಸ ವರ್ಷದ ಸಂತೋಷ ಮತ್ತು ಸಮೃದ್ಧಿಗಾಗಿ ಶಿವನಿಗೆ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ. ಶಿವ, ದುರ್ಗಾ ಮಾತೆ, ಕಾಳಿ, ನಂದಿ ಮತ್ತು ಭೃಂಗಿ ವೇಷ ಧರಿಸಿದ ಕಲಾವಿದರು ಡ್ರಮ್‌ಗಳ ಬಡಿತಕ್ಕೆ ನೃತ್ಯ ಮಾಡುತ್ತಾರೆ ಮತ್ತು ಶಿವನನ್ನು ಸ್ತುತಿಸಿ ಹಾಡುಗಳನ್ನು ಹಾಡುತ್ತಾರೆ. ತ್ರಿಪುರಾದಲ್ಲಿ ಇನ್ನೊಂದು ಪ್ರಮುಖವಾದ ಗಲಾಮುಚಮೋ ನೃತ್ಯ ಸುಗ್ಗಿಯ ಋತುವಿನ ಕೊನೆಯಲ್ಲಿ ಆಚರಿಸಲಾಗುತ್ತದೆ. ಉತ್ತಮ ಸುಗ್ಗಿಗಾಗಿ ದೇವರಿಗೆ ಧನ್ಯವಾದ ಅರ್ಪಿಸಲು ಗಾಲಾಮುಚಮೊ ನೃತ್ಯವನ್ನು ನಡೆಸಲಾಗುತ್ತದೆ. ಈ ನೃತ್ಯದ ಸಮಯದಲ್ಲಿ ನೃತ್ಯಗಾರರು ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸುತ್ತಾರೆ ಮತ್ತು ತಮ್ಮ ಸಂಗೀತ ವಾದ್ಯಗಳನ್ನು ನುಡಿಸುತ್ತಾರೆ. ಈ ನೃತ್ಯವು ತ್ರಿಪುರಾ ಜನ ಸಮುದಾಯದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನೃತ್ಯದ ಮೂಲಕ ಸಮುದಾಯವು ಉತ್ತಮ ಫಸಲುಗಾಗಿ ದೇವರಿಗೆ ಧನ್ಯವಾದಗಳನ್ನು ನೀಡುತ್ತದೆ. ಗಲಾಮುಚಮೊ ನೃತ್ಯವನ್ನು ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದ ನೃತ್ಯಗಾರರು ಪ್ರದರ್ಶಿಸುತ್ತಾರೆ. ನೃತ್ಯದ ಸಮಯದಲ್ಲಿ ನುಡಿಸುವ ಸಂಗೀತ ವಾದ್ಯಗಳು ತ್ರಿಪುರದ ವಿಶಿಷ್ಟವಾಗಿದೆ. ಹಾಗೆ ಇನ್ನೊಂದು ವಿಶಿಷ್ಟ ನೃತ್ಯವಾದ ಚೆರಾವ್ಲಂ ನೃತ್ಯವನ್ನು ತ್ರಿಪುರಾದ ಲುಶೈ ಸಮುದಾಯದ ಹುಡುಗಿಯರು ಪ್ರದರ್ಶಿಸುತ್ತಾರೆ. ಅಕಾಲಿಕ ಮರಣ ಹೊಂದಿದವರ ಗೌರವಾರ್ಥವಾಗಿ ಈ ನೃತ್ಯವನ್ನು ಮಾಡಲಾಗುತ್ತದೆ. ಸಾವಿನ ನಂತರ ಮನುಷ್ಯ ಸ್ವರ್ಗಕ್ಕೆ ಹೋಗುತ್ತಾನೆ ಎಂದು ಅವರು ನಂಬುತ್ತಾರೆ. ಬಿದಿರಿನ ಸದ್ದಿನಿಂದ ಸಾಧಿಸಿದ ಕುಣಿತದ ಲಯದಿಂದ ಗಳಿಸಿದ ಆನಂದ ಮತ್ತು ಧೈರ್ಯ ಮತ್ತು ಆತ್ಮಸ್ಥೈರ್ಯದಿಂದ ಸ್ವರ್ಗಕ್ಕೆ ಹೋಗಲು ಸಾಧ್ಯ ಎಂಬ ನಂಬಿಕೆಯಿದೆ.

# ಸಂಪಾದಕೀಯ

ಕರಾವಳಿ ತರಂಗಿಣಿ

## ತಿಳಿನೀರ ಕೊಳದಂತಿರಲಿ ಮನಸ್ಸು...

– ಲಲಿತಶ್ರೀ ಪ್ರೀತಮ್ ರೈ



ಮನಸ್ಸು ಎಷ್ಟು ತಿಳಿಯಾಗಿರುತ್ತದೋ ಅಷ್ಟು ಮನುಷ್ಯನ ಜೀವನದಲ್ಲಿ ನೆಮ್ಮದಿ ಆವರಿಸಿರುತ್ತದೆ. ಹೌದು ಈ ಮಾತು ಪ್ರತಿಯೊಬ್ಬನ ಜೀವನದಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಬಡವ ಬಲ್ಲಿದನೆನ್ನುವ ಬೇದವಿಲ್ಲದೆ ಅನ್ವಯಿಸುವಂತಹದು. ನಾವು ಹುಟ್ಟಿನಿಂದ ಸಾಯುವವರೆಗೆ ಒಂದೊಂದು ರೀತಿಯ ಕನಸು, ಆದರ್ಶಗಳನ್ನು ಹೊತ್ತುಕೊಂಡು ಬದುಕುತ್ತಿರುತ್ತೇವೆ. ಒಂದು ಚಿಕ್ಕ ಮಗುವನ್ನು ಕೇಳಿ ಮುಂದೆ ನೀನೇನಾಗುತ್ತೀಯ ಅಂತ, ಇಂದು ಆ ಮಗು ಕೊಡುವ ಉತ್ತರ ಇನ್ನೊಂದಾರು ತಿಂಗಳಲ್ಲಿ ಬೇರೆಯಾಗಿರುತ್ತದೆ. ಕಾರಣ ಆ ಮಗುವಿಗೆ ಪರಿಚಯವಾಗುವ ಪಾತ್ರಗಳು. ಒಂದು ಮಗುವಿಗೆ ಒಬ್ಬ ಡಾಕ್ಟರ್‌ನ ಬಗ್ಗೆ ಹೇಳಿದರೆ ಆ ಮಗು ಮನಸ್ಸಲ್ಲಿ ಡಾಕ್ಟರ್ ಆಗುವ ಕನಸು ಕಾಣುತ್ತದೆ. ಅದೇ ಮರುದಿನ ಒಬ್ಬ ಪೊಲೀಸ್ ಬಗ್ಗೆ ಹೇಳಿದರೆ ಆ ಮಗುವಿನ ಕನಸು ಪೊಲೀಸ್ ಕಡೆ ವಾಲುತ್ತದೆ. ಹೀಗೆ ಕನಸುಗಳ ಹಿಂದೆ ಬೀಳುವ ಮನುಷ್ಯನ ಜೀವನ ದಾರಿ ಮುಂದೊಂದು ದಿನ ಎಲ್ಲಿಯೋ ಹೋಗಿ ನಿಲ್ಲುತ್ತದೆ. ಇನ್ನು ಬಹಳ ಬುದ್ಧಿವಂತರು ತನ್ನ ಮಕ್ಕಳಿಗೆ ಲಕ್ಷ್ಮಣ ರೇಖೆ ಹಾಕಿ ಬೆಳೆಸಲು ಪ್ರಯತ್ನಿಸುತ್ತಾರೆ. ಕೆಲವು ಸಲ ಅಂತವರ ಮಕ್ಕಳು ಉಂಡಾಡಿಗಳಾಗಿ ಓಡಾಡುವುದನ್ನು ನಾವು ನೋಡಿದ್ದೇವೆ. ಅದಕ್ಕೆ ಇರಬೇಕು ನಮ್ಮ ಹಿರಿಯರು ಈ ಜಗತ್ತಿನಲ್ಲಿ ಒಂದು ಹುಲ್ಲು ಕಡ್ಡಿ ಅಲ್ಲಾಡಬೇಕಾದರೂ ಆ ದೇವನ ಆಣತಿಯಿರಬೇಕು ಎಂದಿರುವುದು. ನಾನು ಯಾವುದಾದರೂ ಕೆಲಸ ಮಾಡಿ ಸೋಲುತ್ತೇನೆನ್ನುವ ಭಯದಲ್ಲಿ ಮಾತಾಡಿದರೆ ನಮ್ಮಮ್ಮ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು. “ನೀನು ನಿಯತ್ತಿನಿಂದ ಪ್ರಯತ್ನ ಮಾಡು ಫಲಾಫಲ ಆ ದೇವರಿಗೆ ಬಿಟ್ಟದ್ದು” ಒಂದಿಲ್ಲೊಂದು ಸಮಸ್ಯೆಗಳನ್ನು ತಲೆಮೇಲೆ ಹೊತ್ತುಕೊಂಡಿರುವ ಹಾಗಿರುತ್ತಿದ್ದ ನನಗೆ ಅಮ್ಮನ ಕಿವಿ ಮಾತು “ಯಾವಾಗಲೂ ಮನಸ್ಸನ್ನು ತಿಳಿಯಾಗಿಟ್ಟುಕೊಳ್ಳಬೇಕು” ಅಂತ. ಅಮ್ಮನೇನೋ ದೈವ ಭಕ್ತೆ, ದೇವರ ಮೇಲೆ ಭಾರ ಹಾಕಿ ತಾನು ನೆಮ್ಮದಿಯಾಗಿರುತ್ತಿದ್ದರು. ಆದರೆ ನಾವು? ಕನಸುಗಳ ಮೂಟೆ ಹೊತ್ತು ಓಡುವ ನಮ್ಮ ಮನಸ್ಸು ತಿಳಿಯಾಗಿರಬೇಕೆಂದರೆ. ಅದು ಹೇಗೇ ಸಾಧ್ಯ? ಇದು ಇವತ್ತಿನ ಸಮಾಜದಲ್ಲಿ ಸಾಧ್ಯವೇ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತದೆ ಆದರೆ ಒಮ್ಮೆ ಬದುಕಿ ನೋಡಬೇಕು. ಹೇಳುವುದರಿಂದ ಕೇಳುವುದರಿಂದ ಇದು ಸಿಗಲು ಸಾಧ್ಯವಿಲ್ಲ, ಕೆಲವೊಂದು ನಮ್ಮ ಅನುಭವಕ್ಕೆ ಬರಬೇಕು. ನೆಮ್ಮದಿಯಿಂದ ಬದುಕಲು ನಾವು ಮೊದಲು ನಮ್ಮಲ್ಲಿಯ ಅಹಂ ಬಿಡಬೇಕು. ನಾನೇ ದೊಡ್ಡವನು, ನನ್ನನ್ನು ಬಿಟ್ಟರೆ ಬೇರೆಯವರಿಲ್ಲ, ನನಗೇ ಎಲ್ಲವೂ ಗೊತ್ತು, ಇನ್ನೊಬ್ಬರಿಂದ ಕಲಿಯುವುದು ಏನಿದೆ? ಇವೆಲ್ಲ ನೆಮ್ಮದಿಯ ಬದುಕಿಗೆ ಬೇಡವಾದದ್ದು. ಇಂತಹ ಮಾನಸಿಕ ಪ್ರವೃತ್ತಿ ಬೆಳೆಯುತ್ತಾ ಹೋದಂತೆ ನಮ್ಮೊಳಗೆ ಒಂದು ತರಹದ ಅಸಮಾಧಾನ ಹೆಚ್ಚುತ್ತಾ ಹೋಗುತ್ತದೆ. ಗರ್ವವು ವಿನಾಶಕಾರಣ ನಮ್ಮಲ್ಲಿಯ ಮಾನಸಿಕ ಅಸಮತೋಲನವನ್ನು ಹೆಚ್ಚಿಸುತ್ತದೆ. ಆಕಾಶದೆತ್ತರಕ್ಕೆ ಬೆಳೆಯಲು ಇಂತಹ ತೂಕ ಕಡಿಮೆ ಇದ್ದಷ್ಟು ಒಳ್ಳೆಯದು. ಅದಕ್ಕೆ ನೀರಿನ ಹಾಗೆ ತಿಳಿಯಾಗಿರಬೇಕು ಮನಸ್ಸು. ನಿಂತ ನೀರಿಗೆ ಕಲ್ಲು ಬಿಸಾಕಿದಾಗ ಹೇಗೆ ಮಣ್ಣು ಕಸವೆಲ್ಲಾ ಕದಡಿ ಮಲೀನವಾಗುವುದೋ ಹಾಗೇ ಮನಸ್ಸು ಕೂಡ. ಇಂದು ಸಮಾಜದಲ್ಲಿ ನಾವು ಹಲವಾರು ಪಾತ್ರಗಳನ್ನು ನಿಭಾಯಿಸಬೇಕಾಗುತ್ತದೆ. ತಂದೆ, ತಾಯಿ, ಗಂಡ, ಹೆಂಡತಿ, ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿ ಹೀಗೆ ಯಾವುದೋ ಒಂದು ಪಾತ್ರವಿರುತ್ತದೆ ಹೀಗೆ ಕ್ಷಣಕ್ಷಣಕ್ಕೂ ಬದಲಾಗುತ್ತದೆ. ಎಲ್ಲಾ ಕಡೆ ನನಗೆ ಬೇಕಾದ ಹಾಗೆ ಇರಲು ಸಾಧ್ಯವಿಲ್ಲ. ನಾವು ಯಾರಿಗೆ ಬಗ್ಗದೇ ಹೋದರೂ ಕಾಲಕ್ಕೆ ಬಗ್ಗಲೇ ಬೇಕು. ಯಾವುದೇ ಪರಿಸ್ಥಿತಿ ಕಟ್ಟಿದಿರುವುದಿಲ್ಲ. ಒಳ್ಳೆಯ ಹಾಗು ಕೆಟ್ಟ ಸಮಯ ಅಂತ ಇರುವುದಿಲ್ಲ. ನಾವು ಸಮಯಕ್ಕೆ ಸ್ಪಂದಿಸಿದ ಹಾಗಿರುತ್ತದೆ. ಕೋಪ, ತಾಪವಿಲ್ಲದೆ ಸಾಂಗತ್ಯದ ಬದುಕನ್ನು ನೀರಿನಿಂದ ಕಲಿಯಬೇಕು. ಚೀನಾದ ತತ್ವಜ್ಞಾನಿಯಾದ ತಾವೋ ತೇ ಚಿಂಗ್ ಹೇಳುತ್ತಾರೆ. “ನೀರಿನ ಹಾಗೆ ಬದುಕಬೇಕು” ಅಂತ. ನೀರು ಹುಟ್ಟುವುದು ಎಲ್ಲೋ ಆಮೇಲೆ ಸೇರುವುದು ಇನ್ನೆಲ್ಲೋ ಆ ನಡುವೆ ಅದೆಷ್ಟು ವಸ್ತುಗಳೊಂದಿಗೆ ಸೇರಿ ಬದುಕುತ್ತದೆ ಅಲ್ಲವೇ? ಹರಿದು ಬರುವಾಗ ಕಲ್ಲುಗಳು, ಮಣ್ಣುಗಳು, ಮುಳ್ಳುಗಳು, ಕೊಳಚೆ, ಹಳ್ಳ, ಕೊಳ್ಳ ಎಲ್ಲವೂ ಬಂದು ಸೇರುತ್ತದೆ. ಒಂದು ಕಡೆ ಝರಿಯಾಗಿ ಹರಿದರೆ ಇನ್ನೊಂದು ಕಡೆ ಕಾಲುವೆಯಲ್ಲಿ ಸರಸರನೆ ಹೋಗುತ್ತದೆ. ನದಿಯಲ್ಲಿ ಸಿಹಿಯಾಗಿ, ಸಾಗರದಲ್ಲಿ ಉಪ್ಪಾಗಿ ಬದುಕುತ್ತದೆ. ನೀರಿನಿಂದ ನಾವು ಹೊಂದಿಕೊಂಡು ಬಾಳುವುದನ್ನ ಕಲಿಯಬೇಕು. ಅದರ ಹಾಗೆ ಸಾಮರಸ್ಯದಲ್ಲಿ ನಾವು ಬದುಕಬೇಕು. ನಾವು ಎಷ್ಟೇ ನಾನು ನನ್ನದು ಅಂತ ಮೆರೆದರೂ ಕೊನೆಗೊಂದು ದಿನ ನಮಗೇನಾಗಬೇಕೆನ್ನುವುದನ್ನು ಆ ದೇವನು ನಿರ್ದರಿಸಿಯೇ ಈ ಭೂಮಿಗೆ ಕಳುಹಿಸುತ್ತಾನೆ ಎನ್ನುವುದನ್ನು ಮರೆಯಬಾರದು. ಅದಕ್ಕೆ ಉದಾಹರಣೆ ಎಂಬಂತೆ ನಮ್ಮ ಮುಂದೆ ಸಾವಿರಾರು ಕೋಟಿಗಳ ಸರದಾರುಗಳ ಅಂತ್ಯವನ್ನು ನಾವು ನೋಡಿದ್ದೇವೆ. ಹೀಗಿರುವಾಗ ನಾವು ನಮ್ಮ ಮುಂದಿನ ಪೀಳಿಗೆಗೆ ಹೇಳಿಕೊಡಬೇಕಾಗಿರುವುದು ಮನುಷ್ಯತ್ವವನ್ನು ಮಾತ್ರ. ಹಾಗಾಗಿ ನಮ್ಮ ಹಿರಿಯರು ನಮಗಾಗಿ ಜೋಡಿಸಿದ ಅನುಭವದ ಸರಮಾಲೆಯನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಪಸರಿಸುತ್ತಾ ಉತ್ತಮ ಸಮಾಜದ ನಿರ್ಮಾಣಕ್ಕೆ ದಾರಿ ದೀಪವಾಗೋಣ....

# ವೈದ್ಯೋನಾರಾಯಣೋ ಹರೀಃ

## ಅತ್ತಿಮರ




ಸಾಧಾರಣ 10–15 ಮೀಟರ್ ಎತ್ತರ ಬೆಳೆಯುವ ಸದಾ ಹಸಿರಾಗಿರುವ ಈ ವೃಕ್ಷದ ಎಲೆಗಳನ್ನು ಕೆಲವು ಕಡೆ ಕುರಿ, ಆಡು, ದನಕರುಗಳಿಗೆ ಮೇವಾಗಿ ತಿನ್ನಿಸುತ್ತಾರೆ. ಎಲೆ, ಕಾಯಿ, ಫಲ, ತೊಗಟೆಯಿಂದ ಹಳದಿ ವರ್ಣದ, ಅಂಟಾದ ಹಾಲು ಬರುವುದು, ಕಾಯಿ ಹಸಿರಾಗಿದ್ದು, ಗುಂಡಾಗಿರುವುದು. ಮೃದು ಮತ್ತು ಪರಿಮಳಯುಕ್ತವಾದ ಇದರ ಹಣ್ಣುಗಳೆಂದರೆ ಪಶುಪಕ್ಷಿಗಳಿಗೆ ಪ್ರಿಯ. ಇದರ ಹೂವುಗಳು ಅತಿ ಚಿಕ್ಕದಾಗಿದ್ದು ಕಾಣಸಿಗುವುದು ಅಪರೂಪ.

ಉಷ್ಣ ಗುಣ ಹೊಂದಿರುವ ಅತ್ತಿ ಹಣ್ಣಿನ ಸೇವನೆ ಜೀರ್ಣಕ್ರಿಯೆ ಹೆಚ್ಚಿಸುತ್ತದೆ.

ಹಣ್ಣನ್ನು ಜೇನುತುಪ್ಪದೊಡನೆ ನಿಯಮಿತವಾಗಿ ಸೇವಿಸಿದರೆ ಮೂತ್ರದಲ್ಲಿ ಅಥವಾ ಮಲದಲ್ಲಿ ರಕ್ತ ಹೋಗುವುದನ್ನು ಗುಣಪಡಿಸುತ್ತದೆ.

ಹಣ್ಣನ್ನು ತಿನ್ನುವುದರಿಂದ ಕಫದ ಬಾಧೆ, ರಕ್ತನಾಳದ ದೋಷ ಉಪಶಮನವಾಗುತ್ತದೆ.

ಚೆನ್ನಾಗಿ ಪಕ್ವವಾದ, ಹುಳುಕಿಲ್ಲದ, ಹಣ್ಣುಗಳನ್ನು ಚೆನ್ನಾಗಿ ಒಣಗಿಸಿ, ನಯವಾದ ವಸ್ತ್ರಗಾಳಿತ ಚೂರ್ಣ ಮಾಡಿ, 1\2 ಟೀ ಚಮಚ ಚೂರ್ಣಕ್ಕೆ ಸ್ವಲ್ಪ ಜೇನು ಬೆರೆಸಿ ದಿವಸಕ್ಕೆ ಎರಡು ವೇಳೆ ಸೇವಿಸುವುದ ರಿಂದ ಬಹುಮೂತ್ರ ಖಾಯಿಲೆ ಹತೋಟಿಗೆ ಬರುತ್ತದೆ.

ಅತ್ತಿ ಎಲೆಗಳ ರಸವನ್ನು ಹಿಂಡಿ, ಗೋದಿ ಹಿಟ್ಟಿನಲ್ಲಿ ಚೆನ್ನಾಗಿ ಕಲೆಸಿ ಗಟ್ಟಿಯಾದ ಬಾವುಗಳಿಗೆ ಲೇಪಿಸಿ, ಬಟ್ಟೆ ವಾಸಿಯಾಗುವುದು. ಕೀವು ಸೋರುತ್ತಿರುವ ಭಾಗಗಳಿಗೆ ಲೇಪಿಸಿದರೆ ಶೀಘ್ರವಾಗಿ ಗುಣವಾಗುವುವು.

ಅತ್ತಿಮರದ ಕಾಂಡದ ಹಾಲನ್ನು ಮಡಕೆ ಚೂರಿನಲ್ಲಿ ಶೇಖರಿಸಿ, ಕೆನ್ನೆ ಬೀಗಿರುವ ಕಡೆ ಲೇಪಿಸುವುದು ಅಥವಾ ಅತ್ತಿ ಮರದ ಬೇರನ್ನು ನೀರಿನಲ್ಲಿ ತೇದು ಸ್ವಲ್ಪ ಹಿಂಗು ಮತ್ತು ಹರಳೆಣ್ಣೆ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ ಲೇಪಿಸುವುದರಿಂದ ಗಂಡಮಾಲ ಕಡಿಮೆಯಾಗುತ್ತದೆ.

ಅತ್ತಿ ಮರದ ತೊಗಟೆಯನ್ನು ನೆರಳಲ್ಲಿ ಚೆನ್ನಾಗಿ ಒಣಗಿಸಿ ವಸ್ತ್ರಗಾಳಿತ ಚೂರ್ಣ ಮಾಡಿ, ಎರಡು ಟೀ ಚಮಚ ಪುಡಿಯನ್ನು ಕುದಿಯುವ ನೀರಿಗೆ ಹಾಕಿ, ಆರಿದ ಕಷಾಯವನ್ನು ಎರಡು ಟೀ ಚಮಚದಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವುದರಿಂದ ಮದುಮೇಹ ಹತೋಟಿಗೆ ಬರುತ್ತದೆ.

# ಕ್ಷೇತ್ರದರ್ಶನ

ದಕ್ಷಿಣ ಕನ್ನಡ ಜಿಲ್ಲೆಯ, ಸುಳ್ಯ ತಾಲೂಕಿನಲ್ಲಿರುವ ಈ ದೇವಾಲಯವು ಆದಿ ಶಂಕರರ ಕಾಲದಿಂದ ಸ್ಥಾನಿಕಸ್ಮಾರ್ತ ಮೊರೋಜ ಮನೆತನದ ಆಡಳಿತಕ್ಕೆ ಒಳಪಟ್ಟಿದ್ದು, ಹಿಂದೆ ಸ್ಮಾರ್ತ ಬ್ರಾಹ್ಮಣರಿಂದ ಪೂಜಿಸಲ್ಪಡುತ್ತಿದ್ದ ಸುಬ್ರಹ್ಮಣ್ಯ ಈಗ ಮಾಧ್ವ ಬ್ರಾಹ್ಮಣರ ಪೂಜಾಧೀನದಲ್ಲಿದೆ. ನದಿ–ಕಾಡು–ಪರ್ವತಗಳಿಂದ ಆವೃತವಾಗಿ, ಪ್ರಕೃತಿಯ ಮಡಿಲಲ್ಲಿ ವಿರಾಜಮಾನನಾಗಿರುವ ಶ್ರೀಸುಬ್ರಹ್ಮಣ್ಯ ದೇವರು ಇಲ್ಲಿಯ ದೇವಳದ ಪ್ರಧಾನ ದೇವತೆ. ಮುಖ್ಯ ದ್ವಾರವು ಪೂರ್ವಾಭಿಮುಖವಾಗಿದ್ದು, ಭಕ್ತಾದಿಗಳು ಮುಖ್ಯ ಗೋಪುರವಿರುವ ಪಶ್ಚಿಮ ಬಾಗಿಲಿನಿಂದ ಪ್ರವೇಶಿಸಿ ಒಳಸುತ್ತನ್ನು ಪೂರ್ವ ಬಾಗಿಲಿನಿಂದ ಮುಂದುವರಿಯಬೇಕಾಗಿದೆ. ಗರ್ಭಗುಡಿಯ ಮಧ್ಯ ಭಾಗದಲ್ಲಿ ಶ್ರೀ ದೇವರ ಮೂರ್ತಿಯಿದೆ. ಅದರ ಮೇಲಿನ ಹಂತದಲ್ಲಿ ಶ್ರೀ ಸುಬ್ರಹ್ಮಣ್ಯ ಮೂರ್ತಿ ಮತ್ತು ವಾಸುಕಿ ಹಾಗೂ ಕೆಳ ಹಂತದಲ್ಲಿ ಆದಿಶೇಷನ ಮೂರ್ತಿಗಳಿವೆ. ಕುಕ್ಕೆ ಸುಬ್ರಹ್ಮಣ್ಯ ನಾಗಗಳ ವಾಸ ಸ್ಥಾನವಾಗಿದೆ. ಇಲ್ಲಿ ಶ್ರೀ ಸುಬ್ರಹ್ಮಣ್ಯನಿಗೆ ಸಲ್ಲಿಸಿದ ಪೂಜೆಯು ಸರ್ಪರಾಜನಾದ ವಾಸುಕಿಗೆ ಸಲ್ಲುತ್ತದೆ ಎಂಬುದು ನಂಬಿಕೆ. ಪೌರಾಣಿಕ ಹಿನ್ನೆಲೆಯ ಪ್ರಕಾರ ದುಷ್ಟ ರಾಕ್ಷಸರ ದಮನಕ್ಕಾಗಿ ಜನ್ಮವೆತ್ತಿದ ಕುಮಾರಸ್ವಾಮಿಯು ತಾರಕಾದಿ ಅಸುರರನ್ನು ಯುದ್ಧದಲ್ಲಿ ಸಂಹರಿಸಿ, ಸೋದರ ಗಣಪತಿಯ ಜೊತೆ ಕುಮಾರಪರ್ವತಕ್ಕೆ ಬಂದಾಗ ದೇವೇಂದ್ರನು ತನ್ನ ಮಗಳಾದ ದೇವಸೇನೆಯನ್ನು ಕುಮಾರಸ್ವಾಮಿಗೆ ಕುಮಾರಧಾರ ತೀರ್ಥದ ತಟದಲ್ಲಿ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಪಾಣಿಗ್ರಹಣ ಮಾಡಿದನು. ಅದೇ ವೇಳೆ ಅಲ್ಲಿಯೇ ತಪಸ್ಸನ್ನಾಚರಿಸುತ್ತಿದ್ದ ನಾಗರಾಜನಾದ ವಾಸುಕಿಯ ಪ್ರಾರ್ಥನೆಯನ್ನು ಮನ್ನಿಸಿ ತಾನು ದೇವಸೇನಾ ಸಮೇತನಾಗಿ ಒಂದಂಶದಿಂದ ಅವನಲ್ಲಿ ನಿತ್ಯ ಸನ್ನಿಹಿತನಾಗಿ ಈ ಕ್ಷೇತ್ರದಲ್ಲಿ ನೆಲೆಸುವುದಾಗಿ ವಾಸುಕಿಯನ್ನು ಹರಸುತ್ತಾನೆ. ಪರಶುರಾಮ ಸೃಷ್ಠಿಯ ಸಪ್ತ ಕ್ಷೇತ್ರಗಳಲ್ಲೊಂದಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಪುರಾಣ, ಇತಿಹಾಸ ಕಾಲಗಳಿಂದಲೂ ನಾಗಾರಾಧನೆಗೆ ಪ್ರಸಿದ್ಧಿಯಾಗಿದ್ದು, ವಾಸುಕೀ ಸನ್ನಿಹಿತ ಶ್ರೀ ಸುಬ್ರಹ್ಮಣ್ಯ ದೇವರು ಭಕ್ತಾಭೀಷ್ಟಪ್ರದಾಯಕನಾಗಿ ಈ ಕ್ಷೇತ್ರದ ಅಧಿದೇವತೆಯಾಗಿ ನೆಲೆಸಿರುತ್ತಾನೆ. ಗುಪ್ತ ಕ್ಷೇತ್ರವೆಂಬುವುದಾಗಿಯೂ ಈ ಕ್ಷೇತ್ರವನ್ನು ಕರೆಯುತ್ತಾರೆ. ಮೃತ್ತಿಕಾ ಪ್ರಸಾದ ಇಲ್ಲಿನ ಶ್ರೇಷ್ಠ ಪ್ರಸಾದವಾಗಿದೆ. ಪವಿತ್ರ ಕುಮಾರಧಾರ ತೀರ್ಥ ಸ್ನಾನದಿಂದ ಕುಷ್ಠ ರೋಗದಂತಹ ಭಯಾನಕ ರೋಗಗಳೂ, ಚರ್ಮ ವ್ಯಾಧಿಗಳೂ ಶಮನವಾಗುವುದೆಂಬುದು ಭಕ್ತರ ಅಪಾರ ನಂಬಿಕೆ. ಸರ್ಪದೋಷದಿಂದ ಬರುವಂತಹ ಸಂತಾನ ಹೀನತೆ, ಚರ್ಮವ್ಯಾಧಿ, ದೃಷ್ಠಿ ಮಾಂದ್ಯ, ಭೂಮಿ ದೋಷವೇ ಮೊದಲಾದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವಾಗಿ ಸರ್ಪಸಂಸ್ಕಾರ, ನಾಗಪ್ರತಿಷ್ಠೆ, ಆಶ್ಲೇಷಬಲಿ ಇತ್ಯಾದಿ ಪ್ರಮುಖ ಹರಕೆ ಸೇವೆಗಳನ್ನು ಭಕ್ತರು ಇಲ್ಲಿ ನಡೆಸಿಕೃತಾರ್ಥರಾಗುತ್ತಾರೆ. ಜನ್ಮ ಜನ್ಮಾಂತರದ ದುರಿತಗಳ ನಾಶನಾದ ಶ್ರೀ ಸುಬ್ರಹ್ಮಣ್ಯ ದೇವರು ಭಕ್ತಾದಿಗಳ ಶ್ರದ್ಧಾ–ಭಕ್ತಿ ಪೂರ್ವಕ ಸೇವಾ ಕೈಂಕರ್ಯಗಳನ್ನು ಸ್ವೀಕರಿಸಿ ಇಷ್ಟಾರ್ಥಗಳನ್ನು ಕರುಣಿಸಿ ಪೊರೆಯುವ ಕಲಿಯುಗ ಪ್ರತ್ಯಕ್ಷ ದೇವರೆನಿಸಿಕೊಂಡಿದ್ದಾನೆ. ಇಂತಹ ಪವಿತ್ರ ಕ್ಷೇತ್ರಕ್ಕೆ ಬೇಟಿ ಕೊಟ್ಟು ಶ್ರೀಸ್ವಾಮಿಯ ಕೃಪೆಗೆ ಪಾತ್ರರಾಗಲು ಮರೆಯದಿರಿ.




ಮಹತೋಬಾರ ಶ್ರೀ ಸುಬ್ರಮಣ್ಯ

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಪ್ರಕೃತಿಯ ಚಂದವನ್ನು ಬಣ್ಣಿಸಲು ಅಸಾಧ್ಯ. ಯಾಕೆಂದರೆ ಈ ಪ್ರಕೃತಿಯಲ್ಲಿ ಅಡಗಿರುವ ಸೌಂದರ್ಯದ ಸೆಳೆತವೇ ಅಸಮಾನ್ಯವಾದುದು. ಅದನ್ನು ಬಣ್ಣಿಸುತ್ತಾ ಹೋದರೆ ಪದಗಳಿಗೆ ನಿಲುಕದೇ ಹೋಗಬಹುದು. ಭಾರತದ ಉತ್ತರಾಖಂಡ ರಾಜ್ಯದಲ್ಲಿ ಪಶ್ಚಿಮ ಹಿಮಾಲಯದ ಉನ್ನತ ಪ್ರದೇಶದಲಿರುವ ಸಮುದ್ರ ಮಟ್ಟದಿಂದ 3352 ರಿಂದ 3658 ಮೀಟರ್ ಎತ್ತರದಲ್ಲಿರುವ ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನವು ಅದ್ಭುತ ಪ್ರಕೃತಿ ಸೌಂದರ್ಯಕ್ಕೆ ಹೆಸರಾಗಿದ್ದು, ನೂರಾರು ಬಗೆಯ ಅಸಾಮಾನ್ಯ ಹೂವುಗಳ ನೈಸರ್ಗಿಕ ತೋಟವಾಗಿದೆ. ಅಷ್ಟೇ ಅಲ್ಲದೆ ಜೀವ ವೈವಿಧ್ಯದ ನೆಲೆಯಾಗಿರುವ ರಾಷ್ಟ್ರೀಯ ಉದ್ಯಾನವು ಟಾಹ್ರ್, ಹಿಮ ಚಿರತೆ, ಕಸ್ತೂರಿ ಮೃಗ, ಕೆಂಪು ನರಿ, ಕೋತಿ, ಭರಲ್, ಹಿಮಾಲಯದ ಕಪ್ಪು ಕರಡಿ ಮತ್ತು ಕೆಂಪು ಕರಡಿ, ಪಿಕಾಲ್ ಮುಂತಾದ ಪ್ರಾಣಿಗಳಿಗೆ ನೆಲೆಯಾಗಿದೆ. ಅಗಾಧ ಸಂಖ್ಯೆಯ ಚಿಟ್ಟೆಗಳ ಪ್ರಬೇಧಗಳು ಇಲ್ಲಿ ಕಾಣ ಸಿಗುತ್ತದೆ. ಅಲ್ಲದೆ ಹಿಮಾಲಯದ




ಗರುಡ, ಗ್ರಿಫಾನ್ ಹದ್ದು, ಹಿಮ ಕೋಳಿ, ಮೊನಾಲ್, ಹಿಮ ಪಾರಿವಾಳ ಮುಂತಾದ ಹಲವಾರು ಪಕ್ಷಿ ಸಮೂಹವೇ ಇಲ್ಲಿ ನೆಲೆಸಿದೆ. ಇಲ್ಲಿನ ಹೂವುಗಳು ಆಲ್ಪೈನ್ ತಳಿಗೆ ಸೇರಿದ್ದು ಮುಖ್ಯವಾಗಿ ಆರ್ಖಿಡ್, ಪ್ರೈಮ್ಯೂಲಾ, ಮೇರಿಗೋಲ್ಡ್, ಡೈಸೀಗಳು ಹೆಚ್ಚಾಗಿವೆ. ಇಲ್ಲಿನ ಪ್ರದೇಶವು ಆಲ್ಪೈನ್ ಬಿರ್ಚ್ ಮತ್ತು ರೋಡೋಡೆಂಡ್ರಾನ್ ಮರಗಳನ್ನು ಹೆಚ್ಚಾಗಿ ಹೊಂದಿರುವ ಕಾಡಿನಿಂದ ಆವೃತವಾಗಿದೆ. ಇದು ಸ್ಥಳೀಯ ಆಲ್ಪೈನ್ ಹೂವುಗಳ ಹುಲ್ಲುಗಾವಲುಗಳು ಮತ್ತು ವಿವಿಧ ಸಸ್ಯವರ್ಗಗಳಿಗೆ ಹೆಸರುವಾಸಿಯಾಗಿದ್ದು, ಕಪ್ಪು ಕರಡಿ, ಹಿಮ ಚಿರತೆ, ಕಸ್ತೂರಿ ಜಿಂಕೆ, ಕಂದು ಕರಡಿ, ಕೆಂಪು ನರಿ ಮತ್ತು ನೀಲಿ ಕುರಿಗಳು ಸೇರಿದಂತೆ ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಾಣಿಗಳಿಗೆ ಈ ಸಮೃದ್ಧ ವೈವಿಧ್ಯಮಯ ಪ್ರದೇಶವಿದೆ. ಉದ್ಯಾನದಲ್ಲಿ ಕಂಡು ಬರುವ ಪಕ್ಷಿಗಳಲ್ಲಿ ಹಿಮಾಲಯನ್ ಮೋನಾಲ್ ಫೆಸೆಂಟ್ ಮತ್ತು ಇತರ ಎತ್ತರದ ಪಕ್ಷಿಗಳು ಸೇರಿವೆ. ನಂದಾದೇವಿ ರಾಷ್ಟ್ರೀಯ ಉದ್ಯಾನದೊಂದಿಗೆ ಗುರುತಿಸಲ್ಪಡುವ ಈ ಉದ್ಯಾನ ಉನ್ನತ ಪರ್ವತ ಪ್ರಾಂತ್ಯವಾಗಿದ್ದರೂ ಸಹ ತೀವ್ರ ಕಡಿದಾಗಿಲ್ಲ. ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣವು ಸುಮಾರು 87.50 ಚದರ ಕಿ.ಮೀ. ಗಳಷ್ಟು ಈ ಎರಡೂ ಉದ್ಯಾನಗಳು ಒಟ್ಟಾಗಿ ವಿಶ್ವ ಪರಂಪರೆಯ ತಾಣವಾಗಿ ಮಾನ್ಯತೆ ಪಡೆದಿವೆ. ಇಲ್ಲಿ ಇರುವ ಔಷದೀಯ ಗಿಡಮೂಲಿಕೆಗಳ ಪ್ರಕಾರಗಳು ಹಿಮಾಲಯದ ಇತರ ಯಾವುದೇ ಪ್ರದೇಶಗಳಲ್ಲಿಗಿಂತ ಹೆಚ್ಚಾಗಿದೆ. ಕೆಲವು ಗಿಡ ಮೂಲಿಕೆಗಳಂತೂ ಪಕ್ಕದಲ್ಲಿಯೇ ಇರುವ ನಂದಾದೇವಿ ಉದ್ಯಾನವನದಲ್ಲಿಯೂ ಕಾಣ ಸಿಗುವುದಿಲ್ಲ ಎನ್ನುವುದೇ ಅಚ್ಚರಿಯ ವಿಷಯ. 1931ರ ವರೆಗೂ ಹೊರ ಜಗತ್ತಿನಿಂದ ಈ ಕಣಿವೆಯು ದೂರವಾಗಿತ್ತು ಎನ್ನಲಾಗುತ್ತದೆಯಾದರೂ ಹಿಂದೂ ಪುರಾಣಗಳಲ್ಲಿ ಇದರ ಉಲ್ಲೇಖವಿದೆ ಎನ್ನಲಾಗುತ್ತದೆ. ಹಾಗೂ ಋಷಿ ಮುನಿಗಳು ತಪಸ್ಸು ಮಾಡಲು ಈ ಪ್ರದೇಶಕ್ಕೆ ಹೋಗುತ್ತಿದ್ದರು ಎನ್ನುವುದರ ಬಗ್ಗೆ ಕೂಡ ಉಲ್ಲೇಖಗಳಿವೆ. ಇತಿಹಾಸದ ಪ್ರಕಾರ ಪರ್ವತಾ ರೋಹಿ ಫ್ರಾಂಕ್ ಸ್ಮಿತ್ ಎಂಬಾತ ಹಿಮಾಲಯ ಪರ್ವತವನ್ನು ಏರುವಾಗ ದಾರಿ ತಪ್ಪಿ ಈ ಕಣಿವೆಗೆ ಭೇಟಿ ನೀಡುತ್ತಾನೆ. ಇಲ್ಲಿನ ಹೂವುಗಳ ಸೌಂದರ್ಯವನ್ನು ಕಂಡು ಬರೆಗಾದ ಆತ "ವ್ಯಾಲಿ ಆಫ್ ಫ್ಲವರ್ಸ್" ಎಂಬ ಪುಸ್ತಕವನ್ನು ಹೊರ ತರುತ್ತಾನೆ. ಆ ಬಳಿಕ ಇದು ಹೆಚ್ಚು ಪ್ರಸಿದ್ಧಿಗೆ ಬಂತು. ಉದ್ಯಾನವನ್ನು 1982ರಲ್ಲಿ ರಾಷ್ಟ್ರೀಯ ಉದ್ಯಾನವನ್ನಾಗಿ ಘೋಷಿಸಲಾಯಿತು. ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿ ಯಾವುದೇ ಜನವಸತಿ ಇಲ್ಲ. ಅಲ್ಲದೆ ಜಾನುವಾರುಗಳನ್ನು ಇಲ್ಲಿ ಮೇಯಿಸುವುದನ್ನು ನಿಷೇಧಿಸಲಾಗಿದೆ. ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ತೆರೆದಿರುವ ಈ ಪ್ರದೇಶವು ಇತರ ಸಮಯದಲ್ಲಿ ಸಂಪೂರ್ಣವಾಗಿ ಹಿಮದಿಂದ ಮುಚ್ಚಿ ಹೋಗಿರುತ್ತದೆ. ಹಿಮಾಲಯದ ಝಂಸ್ಕಾರ್ ಶ್ರೇಣಿಯಲ್ಲಿರುವ ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನದ ಅತ್ಯುನ್ನತ ಸ್ಥಾನವೆಂದರೆ 6719 ಮೀ. ಎತ್ತರವಿ ರುವ ಗೌರಿ ಪರ್ಬತ್. ಈ ರಾಷ್ಟ್ರೀಯ ಉದ್ಯಾನವನ್ನು ತಲುಪಲು ಸುಮಾರು 17 ಕಿ.ಮೀ. ಗಳಷ್ಟು ದೂರವನ್ನು ಕಾಲ್ನಡಿಗೆಯಿಂದ ಕ್ರಮಿಸಬೇಕಾಗುತ್ತದೆ. ಇಲ್ಲಿಗೆ ಸಮೀಪದ ದೊಡ್ಡ ಪಟ್ಟಣವೆಂದರೆ ಜೋಷಿಮಠ. ಜೋಷಿಮಠವು ಹರಿದ್ವಾರ ಮತ್ತು ಡೆಹ್ರಾಡೂನ್ ನಗರಗಳೊಂದಿಗೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದ್ದು, ಜೋಷಿಮಠದಿಂದ ಬದರಿನಾಥಕ್ಕೆ ತೆರಳುವ ರಸ್ತೆಯಲ್ಲಿ ಗೋವಿಂದ್ ಘಾಟ್ ಎಂಬ ಹಳ್ಳಿಗೆ ಸಾಗಿ ಅಲ್ಲಿಂದ ಮುಂದೆ ಕಾಲುದಾರಿಯನ್ನು ಹಿಡಿದು ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನಕ್ಕೆ ತೆರಳಬೇಕಾಗುತ್ತದೆ.

# ಕಲ್ಪವೃಕ್ಷ

@ಪ್ರೀತಂ ರೈ ಇ

## ಮೇ. ಸುರೇಂದರ್ ಮೋಹನ್ ಶರ್ಮಾ

ಸೆಪ್ಟೆಂಬರ್ 1965 ರ ಸಮಯದಲ್ಲಿ ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರ ಘಟಕ 8 JAK Rif ಅನ್ನು J & K ನಲ್ಲಿನ ಛಂಬ್ ಸೆಕ್ಟರ್‌ನಲ್ಲಿ ನಿಯೋಜಿಸಲಾಯಿತು. ಪಾಕಿಸ್ಥಾನವು ಆಗಸ್ಟ್ 1965ರಲ್ಲಿ 'ಆಪರೇಷನ್ ಜಿಬ್ರಾಲ್ಟರ್' ಅನ್ನು ಪ್ರಾರಂಭಿಸಿತು. ಇದರಲ್ಲಿ ಸಾವಿರಾರು ನುಸುಳುಕೋರರನ್ನು ವಿಧ್ವಂಸಕ ಮತ್ತು ವಿಧ್ವಂಸಕತೆಯನ್ನು ನಡೆಸಲು ಗಡಿಯಾದ್ಯಂತ ಕಳುಹಿಸಲಾಯಿತು. ಆಪ್ ಜಿಬ್ರಾಲ್ಟರ್ ವೈಫಲ್ಯದ ನಂತರ, ಪಾಕಿಸ್ಥಾನವು 01 ಸೆಪ್ಟೆಂಬರ್ 1965 ರಂದು ಚಂಬ್ ಜಿಲ್ಲೆಯ ಮೇಲೆ ಆಕ್ರಮಣ ಮಾಡಿತು. ಭಾರತೀಯ ಪಡೆಗಳಿಂದ ಆಕ್ರಮಣಕಾರಿ ಪ್ರತಿಕ್ರಿಯೆಯನ್ನು ಪ್ರಚೋದಿಸಿತು. 13 ಸೆಪ್ಟೆಂಬರ್ 1965 ರ ಹೊತ್ತಿಗೆ, 8 JAK ರೈಫಲ್ಸ್ ಅನೇಕ ಯಶಸ್ವಿ ಕಾರ್ಯಾಚರಣೆಗಳ ಭಾಗವಾಗಿತ್ತು ಮತ್ತು ಪಾಕಿಸ್ಥಾನದ ಸಿಯಾಲ್‌ಕೋಟ್ ವಲಯದ ಕಲಾರವಂಡಾದಲ್ಲಿ ಸ್ಥಾಪಿಸಲಾಯಿತು. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು 8 ಜೆಎಕೆ ರೈಫಲ್ ಬೆಟಾಲಿಯನ್‌ನ ಕಂಪನಿಯೊಂದರ ಕಂಪನಿ ಕಮಾಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. 13 ನೇ ಸೆಪ್ಟೆಂಬರ್ 1965 ರ ರಾತ್ರಿ, ಮೇಜ್ ಸುರೇಂದರ್ ಮೋಹನ್ ಶರ್ಮಾ ಅವರ ಕಂಪನಿಯು ಟ್ಯಾಂಕ್‌ಗಳ ತುಕಡಿಯೊಂದಿಗೆ ಪದಾತಿದಳದ ಬೆಟಾಲಿಯನ್ ಮತ್ತು ಪ್ಯಾಟನ್ ಟ್ಯಾಂಕ್‌ಗಳ ಸ್ಕ್ವಾಡ್ರನ್ ಅನ್ನು ಒಳಗೊಂಡ ಶತ್ರು ಪಡೆಗಳಿಂದ ದಾಳಿ ಮಾಡಿತು. ಶತ್ರುಗಳು ಸಂಖ್ಯಾತ್ಮಕವಾಗಿ ಶ್ರೇಷ್ಠರಾಗಿದ್ದರು ಮತ್ತು ಫಿರಂಗಿ ಮತ್ತು ರಕ್ಷಾಕವಚದಿಂದ ಬೆಂಬಲಿತರಾಗಿದ್ದರು. ಭಾರೀ ಶೆಲ್ ದಾಳಿ ಮತ್ತು ಟ್ಯಾಂಕ್ ದಾಳಿಯ ನಂತರ, ಶತ್ರು ಪದಾತಿ ಸೈನ್ಯದ ಬೆಟಾಲಿಯನ್ 8 JAK Rif ಕಂಪನಿಯ ಸ್ಥಾನಗಳ ಮೇಲೆ ದಾಳಿ ಮಾ




ಡಿತು. ಭಾರೀ ವಿರೋಧಾಭಾಸಗಳ ಹೊರತಾಗಿಯೂ, ಮೇಜ್ ಶರ್ಮಾ ತನ್ನ ಜನರನ್ನು ಹೋರಾಟವನ್ನು ಮುಂದುವರಿಸಲು ಪ್ರೇರೇಪಿಸಿದರು. ಅವರು ತೀವ್ರವಾದ ಶತ್ರುಗಳ ಗುಂಡಿನ ದಾಳಿಯಲ್ಲಿಯೂ ಯುದ್ಧವನ್ನು ಒಂದು ಪ್ಲಟೂನ್ ಪ್ರದೇಶದಿಂದ ಇನ್ನೊಂದಕ್ಕೆ ನಿರ್ದೇಶಿಸುತ್ತಿದ್ದರು. ಶತ್ರು ಪಡೆಗೆ ಅಗಾಧವಾದ ಸಂಖ್ಯಾತ್ಮಕ ಬಲ ಮತ್ತು ಶೆಲ್ ದಾಳಿಯ ಶಕ್ತಿ ಇದ್ದರೂ ಮೇಜರ್ ಶರ್ಮಾ ಅವರ ಕಂಪನಿಯು ಅದರ ಮೇಲೆ ಭಾರಿ ಸಾವುನೋವುಗಳನ್ನು ಉಂಟುಮಾಡಿತು. ಪಾಕಿಸ್ಥಾನ ಸೇನೆಯ 6 ಫ್ರಾಂಟಿಯರ್ ಫೋರ್ಸ್ ಆರ್ಟಿಲರಿ ಮತ್ತು ಆರ್ಮರ್ ಸ್ಕ್ವಾಡ್ರನ್ ಜೊತೆಗೆ ಮೇಜರ್ ಶರ್ಮಾ ಅವರ ಸ್ಥಾನಗಳ ಮೇಲೆ ದಾಳಿಯನ್ನು ನಡೆಸಿತು. ಮೇಜರ್ ಶರ್ಮಾ ಮತ್ತು ಅವನ ಜನರು ಸಂಪನ್ಮೂಲಗಳ ಕೊರತೆಯ ಹೊರತಾಗಿಯೂ ಶತ್ರುಗಳಿಗೆ ತಕ್ಕ ಉತ್ತರವನ್ನು ನೀಡಿದರು. ಆದಾಗ್ಯೂ ಭೀಕರ ಯುದ್ಧದ ಸಮಯದಲ್ಲಿ ಮೇಜರ್ ಶರ್ಮಾ ಗಂಭೀರವಾಗಿ ಗಾಯಗೊಂಡು ಹುತಾತ್ಮರಾದರು. ಮೇಜರ್ ಶರ್ಮಾ ಒಬ್ಬ ಧೀರ ಸೈನಿಕ ಮತ್ತು ತನ್ನ ಸೈನಿಕರನ್ನು ಮುಂದೆ ನಿಂತು ಮುನ್ನಡೆಸುವ ಉತ್ತಮ ಅಧಿಕಾರಿ. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು ಕರ್ತವ್ಯದ ಕರೆಯನ್ನು ಮೀರಿ ಶತ್ರುಗಳ ಎದುರು ಅಸಾಧಾರಣ ಧೈರ್ಯವನ್ನು ತೋರಿಸಿ, ದೇಶ ಸೇವೆಯಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. ಅವರ ಅಸಾಧಾರಣ ಶೌರ್ಯ, ಹೋರಾಟದ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ ಅವರಿಗೆ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು 28 ಆಗಸ್ಟ್ 1936 ರಂದು ಪಾಕಿಸ್ಥಾನದ ಮುರೀಯಲ್ಲಿ ಜನಿಸಿದರಾದರೂ, ಕುಟುಂಬವು ನಂತರ ಚಂಡೀಗಢದಲ್ಲಿ ನೆಲೆಸಿತು. ಅವರು 21 ನೇ ವಯಸ್ಸಿನಲ್ಲಿ 15 ಡಿಸೆಂಬರ್ 1957 ರಂದು ಸೇನೆಗೆ ಸೇರಿದರು. ಅವರನ್ನು ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನ 3 JAK ರೈಫಲ್ಸ್ ಬೆಟಾಲಿಯನ್‌ಗೆ ನಿಯೋಜಿಸಲಾಯಿತು, ಅವರು ಬೆಟಾಲಿಯನ್‌ಗೆ ಸೇರಿದ ಮೊದಲ ಅಧಿಕಾರಿಗಳಲ್ಲಿ ಒಬ್ಬರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

# ಪಾರಿಜಾತ

## ಕರಾವಳಿ ತರಂಗಿಣಿ

ಹೆಣ್ಣು ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವವಳು. ಹೆಣ್ಣೆಂದರೆ ಒಂದು ಮನೆಯ ಕಣ್ಣು. ಒಂದು ಕಾಲದಲ್ಲಿ ಹೆಣ್ಣನ್ನು ಅಬಲೆಯಾಗಿ ಬಿಂಬಿಸಿದ್ದರೂ ಕೂಡ ತನ್ನ ಮನೆ ಮಂದಿಗೆ ಏನಾದರೂ ಅಪಾಯ ಆಗುತ್ತದೆ ಎಂದರೆ ತಾನು ಎಂತಹ ಸಾಹಸವನ್ನು ಬೇಕಾದರೂ ಮಾಡಲು ಹೆಣ್ಣು ಸಿದ್ಧವಿರುತ್ತಾಳೆ. ಹಾಗೆಯೆ ನಮ್ಮ ನೆಲ, ಜಲದ ವಿಷಯ ಬಂದಾಗಲೂ ಕೂಡ ಹೆಣ್ಣು ವೀರಾವೇಶದಿಂದ ಹೋರಾಡಿರುವುದರ ಉದಾಹರಣೆಯಾಗಿ ಜಾನ್ಸಿ ರಾಣಿ ಲಕ್ಷ್ಮಿ ಭಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಉಳ್ಳಾಲದ ರಾಣಿ ಅಬ್ಬಕ್ಕ, ಚಿತ್ರದುರ್ಗದ ಒನಕೆ ಓಬವ್ವ ಹೀಗೆ ಹಲವಾರು ವೀರ ಮಾತೆಯರ ಹೆಸರನ್ನು ನಾವು ಕೇಳಿದ್ದೇವೆ. ಅವರು ನಮ್ಮಂತಹ ಎಷ್ಟೋ ಹೆಣ್ಣು ಮಕ್ಕಳಿಗೆ ಆದರ್ಶವೂ ಕೂಡ. ಅಂತಹ ಹೆಣ್ಣು ಮಕ್ಕಳ ಆದರ್ಶಗಳೊಂದಿಗೆ ಹೆಣ್ಣುಮಕ್ಕಳು ಸೇನೆಗೆ ಸೇರಿ ಭಾರತ ಮಾತೆಯ ವೀರ ಪುತ್ರಿಯರಾಗಿ ಮೆರೆದಿದ್ದಾರೆ ಹಾಗೇ ಮೆರೆಯುತ್ತಿದ್ದಾರೆ. ಅಂತಹ ಮಹಿಳೆಯರಲ್ಲಿ “ಕರಾವಳಿ ತರಂಗಿಣಿ”ಯ ಇಂದಿನ ಆಯ್ಕೆ “ಗುಂಜನ್ ಸಕ್ಸೇನಾ”. ಗುಂಜನ್ ಸಕ್ಸೇನಾ ಮೂಲತ: ಶ್ರೀನಗರದವರು. ಸಕ್ಸೇನಾ ಅವರ ತಂದೆ ಅನುಪ್ ಸಕ್ಸೇನಾ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದರು. ಹಾಗೆಯೆ ಇವರ ಸಹೋದರ ಅಂಶುಮಾನ್ ಸಕ್ಸೇನಾ ಕೂಡ ಲೆಫ್ಟಿನೆಂಟ್ ಕರ್ನಲ್. ದೇಶದ ಸೇವೆಯನ್ನೆ ಮುಡಿಪಾಗಿಟ್ಟಿದ್ದ ಕುಟುಂಬದಲ್ಲಿ ಹುಟ್ಟಿರುವ ಗುಂಜನ್ ತನ್ನ 24ನೇ ವಯಸ್ಸಿನಲ್ಲಿ ಕಾರ್ಗಿಲ್ ಯುದ್ಧದ ಸಮಯದಲ್ಲಿ ಫ್ಲೈಯಿಂಗ್ ಆಫೀಸರ್ ಸಕ್ಸೇನಾ ಆಪರೇಷನ್






ವಿಜಯ್‌ನ ಭಾಗವಾಗಿ, ಗಾಯಾಳುಗಳನ್ನು ಸ್ಥಳಾಂತರಿಸುವುದರ ಜೊತೆಗೆ, ದ್ರಾಸ್ ಮತ್ತು ಬಟಾಲಿಕ್‌ನ ಮುಂದಿನ ಪ್ರದೇಶಗಳಲ್ಲಿ ಸೈನ್ಯಕ್ಕೆ ಸರಬರಾಜುಗಳನ್ನು ಸಾಗಿಸಲು ಸಹಾಯ ಮಾಡಿದರು. ಶತ್ರುಗಳ ಸ್ಥಾನಗಳನ್ನು ಮ್ಯಾಪಿಂಗ್ ಮಾಡುವಂತಹ ಕಣ್ಗಾವಲು ಪಾತ್ರಗಳನ್ನು ಸಹ ಆಕೆಗೆ ವಹಿಸಲಾಯಿತು. ಈ ಸಂದರ್ಭದಲ್ಲಿ ಹತ್ತು ಪೈಲಟ್‌ಗಳಲ್ಲಿ ಒಬ್ಬರಾಗಿ ರುವುದರ ಜೊತೆಗೆ ಶ್ರೀನಗರ ಮೂಲದ ಏಕೈಕ ಮಹಿಳಾ ಪೈಲಟ್ ಆಗಿದ್ದರು, ಯುದ್ಧದ ಸಮಯದಲ್ಲಿ ನೂರಾರು ಬಾರಿ ವಿಮಾನಗಳನ್ನು ಹಾರಿಸಿದರು, 900 ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸುವಲ್ಲಿ ಕೆಲಸ ಮಾಡಿದ್ದರು. ಸಕ್ಸೇನಾ ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಏಕೈಕ ಮಹಿಳೆ ಕಾರ್ಗಿಲ್ ಯುದ್ಧದಲ್ಲಿ ಯುದ್ಧ ವಲಯಗಳಲ್ಲಿ ಸಕ್ರೀಯ ರಾಗಿದ್ದವರು. 2004 ರಲ್ಲಿ, ಹೆಲಿಕಾಪ್ಟರ್ ಪೈಲಟ್ ಆಗಿ ಆಕೆಯ ವೃತ್ತಿಜೀವನದಲ್ಲಿ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಸಕ್ಸೇನಾ ಅವರ ಪತಿ ಗೌತಮ್ ನಾರಾಯಣ್, ವಿಂಗ್ ಕಮಾಂಡರ್ ಹಾಗೇ ಭಾರತೀಯ ವಾಯು ಪಡೆಯ ಪೈಲಟ್ ಆಗಿದ್ದಾರೆ. ಅವರು ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದರು, ಇದು ವಿಶ್ವದ ಮೊದಲ ತ್ರಿ–ಸೇವಾ ಅಕಾಡೆಮಿಯಾಗಿದೆ. ದಂಪತಿಗೆ ಪ್ರಜ್ಞಾ ಎಂಬ ಮಗಳಿದ್ದಾಳೆ, 1996ರಲ್ಲಿ ಭಾರತೀಯ ವಾಯುಪಡೆಗೆ ಪೈಲಟ್‌ಗಳಾಗಿ ಸೇರಿದ ಆರು ಮಹಿಳೆಯರಲ್ಲಿ ಸಕ್ಸೇನಾ ಒಬ್ಬರು. ಇಂತಹ ವೀರ ವನಿತೆ ಭಾರತಾಂಬೆಗೆ ಇನ್ನಷ್ಟು ಸೇವೆ ಗೈಯುವಂತಾಗಲಿ ಎನ್ನುವುದೇ “ಕರಾವಳಿ ತರಂಗಿಣಿ” ಹಾರೈಕೆ.

# ಸುದ್ದಿ ತುಣುಕು

ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ಪ್ರಕರಣ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರು ಕಣ್ಣೀರು ಹಾಕಿದರು.

ಆರ್‌ಸಿಬಿ ತಂಡ ಗೆದ್ದ ವಿಜಯೋತ್ಸವದ ಸಂದರ್ಭದಲ್ಲಿ ನಡೆದ ದುರ್ಘಟನೆ ಆಕಸ್ಮಿಕವಲ್ಲ, ಇದೊಂದು ಸರ್ಕಾರಿ ಪ್ರಾಯೋಜಿತ ಹತ್ಯಾಕಾಂಡವಲ್ಲವೇ? ಎಂದು ರಾಜ್ಯ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದ್ದಾರೆ.

"ದೊಡ್ಡಮಟ್ಟದ ಸಭೆ, ಸಮಾರಂಭ ಮತ್ತು ವಿಜಯೋತ್ಸವ ಕಾರ್ಯಕ್ರಮಗಳಿಗೆ ಹೊಸ ಎಸ್‌ಒಪಿ (ಸ್ಟಾಂಡರ್ಡ್ ಆಪರೇಟಿವ್ ಪ್ರೊಸಿಜರ್) ಮಾಡಲಾಗುವುದು" ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಜನಸಾಮಾನ್ಯರಿಗೆ ಊಟದೊಂದಿಗೆ ಪ್ರೋಟೀನ್ ಕೊಡುವ ಉದ್ದೇಶದಿಂದ ಇಂದಿರಾ ಕ್ಯಾಂಟೀನ್‌ನಲ್ಲಿ ಮೊಟ್ಟೆ ಕೊಡಲು ಸರ್ಕಾರ ನಿರ್ಧರಿಸಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೊಚ್ಚಲ ಬಾರಿಗೆ ಐಪಿಎಲ್ ಕಪ್ ಗೆದ್ದ ಹಿನ್ನೆಲೆಯಲ್ಲಿ ನಡೆದ ಸಂಭ್ರಮಾಚರಣೆ ವೇಳೆ ಒಟ್ಟು 9,66,732 ಪ್ರಯಾಣಿಕರು ನಮ್ಮ ಮೆಟ್ರೋದಲ್ಲಿ ಪ್ರಯಾಣಿಸಿದ್ದಾರೆ.

ರಾಯಚೂರಿನ ಯೋಧರೊಬ್ಬರು 22 ವರ್ಷ ಸೇವೆ ಬಳಿಕ ತಮ್ಮ ಹುದ್ದೆಗೆ ನಿವೃತ್ತಿ ಘೋಷಿಸಿ ಸ್ವಕ್ಷೇತ್ರಕ್ಕೆ ಮರಳಿ ಬಂದಿದ್ದು, ಅವರನ್ನು ಗೌರವದಿಂದ ಊರಿನ ಜನತೆ ಬರಮಾಡಿಕೊಂಡಿದ್ದಾರೆ.

ಗಾನ ಗಂಧರ್ವ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಜನ್ಮದಿನದ ಈ ಹಿನ್ನೆಲೆ ಮಂಗಳೂರಿನಲ್ಲಿ ಗಾಯಕ ಯಶವಂತ್ ಎಂ.ಜಿ. 24 ಗಂಟೆಗಳ ಗಾಯನದ ಮೂಲಕ ದಾಖಲೆ ಮಾಡಿದ್ದಾರೆ.

ಸಿವಿಲ್ ಪ್ರಕರಣಗಳ ಇತ್ಯರ್ಥಕ್ಕೆ ಕ್ರಿಮಿನಲ್ ಕಾನೂನಿನ ಅಸ್ತ್ರ ಬಳಸುವವರ ಬಗ್ಗೆ ನ್ಯಾಯಾಲಯಗಳು ಎಚ್ಚರದಿಂದ ಇರಬೇಕು ಎಂದು ಹೈಕೋರ್ಟ್ ಹೇಳಿದೆ.

ಕಾಲ್ತುಳಿತ ಸಂಬಂಧ ತನಿಖೆ ನಡೆಸಲು ಬೆಂಗಳೂರು ನಗರ ಜಿಲ್ಲೆ ಡಿಸಿ ಜಗದೀಶ್ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿದೆ.

ಪ್ರಾಚೀನ ಸ್ಮಾರಕಗಳ ಸುತ್ತಲಿನ ನಿಷೇಧಿತ ಪ್ರದೇಶದಲ್ಲಿ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅಧಿಕಾರಿಗಳಿಗೆ ಅನುಮತಿ ನೀಡುವುದನ್ನು ನಿರ್ಬಂಧಿಸಿ ಸುತ್ತೋಲೆ ಹೊರಡಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಗೆ ಹೈಕೋರ್ಟ್ ಸೂಚನೆ ನೀಡಿದೆ.

ವಿದ್ಯುತ್ ಪ್ರಸರಣಾ ವ್ಯವಸ್ಥೆ ಸುಗಮಗೊಳಿಸುವ ಉದ್ದೇಶದಿಂದ ರಾಜ್ಯದಲ್ಲಿ 100 ವಿದ್ಯುತ್ ಉಪ ಸ್ಥಾವರ (ಸಬ್‌ಸ್ಟೇಷನ್)ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಕಾಲಮಿತಿಯಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ವಿಮಾ ಕಂಪನಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದ್ಗಲ್ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುವ ನೈರುತ್ಯ ರೈಲ್ವೆಯು ಇದೇ ಮೊದಲ ಬಾರಿಗೆ ಕಟ್ಟಡ ಕಾಮಗಾರಿಗಳ ಸ್ಥಳಗಳಲ್ಲಿ ಸುರಕ್ಷತೆ, ಗುಣಮಟ್ಟ ಮತ್ತು ದಕ್ಷತೆ ಸುಧಾರಿಸಲು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುತ್ತಿದೆ.

ತೆಲಂಗಾಣದ ಮಹಾತ್ವಕಾಂಕ್ಷೆಯ ಹುಲಿ ಯೋಜನೆ ಪ್ರಾರಂಭವಾಗಿ 9 ವರ್ಷಗಳು ಕಳೆದಿದೆ. ಇದೀಗ ಈ ಆವಾಸಸ್ಥಾನದಲ್ಲಿರುವ ಬುಡಕಟ್ಟು ಜನರನ್ನು ಸರ್ಕಾರ ಯಶಸ್ವಿಯಾಗಿ ಸ್ಥಳಾಂತರ ಮಾಡುವ ಮೂಲಕ ಸಂರಕ್ಷಣೆಯಲ್ಲಿ ಪ್ರಮುಖ ಹೆಜ್ಜೆ ಇಟ್ಟಿದೆ.

# ಬೆಂಡಿ ಪ್ರೈ



**ಬೇಕಾಗುವ ಸಾಮಗ್ರಿಗಳು :**

ಎಳೆಯ ಬೆಂಡೆಕಾಯಿ – 250 ಗ್ರಾಂ
ಕಡಲೆ ಹಿಟ್ಟು – 1 ಚಮಚ
ಸೋಂಪು – 2 ಚಮಚ
ಮೆಣಸಿನ ಪುಡಿ – ಚಮಚ
ಕೊತ್ತಂಬರಿ ಪುಡಿ – 1 ಚಮಚ
ಜೀರಿಗೆ ಪುಡಿ – 1 ಚಮಚ
ಗರಂ ಮಸಾಲ – ಚಮಚ
ತೆಂಗಿನ ಎಣ್ಣೆ – 5–6 ಚಮಚ
ಉಪ್ಪು – ರುಚಿಗೆ ತಕ್ಕಷ್ಟು

**ಮಾಡುವ ವಿಧಾನ :**

ಮೊದಲಿಗೆ ಒಂದು ಮಿಕ್ಸಿ ಜಾರಿಗೆ ಕಡಲೆ ಹಿಟ್ಟು, ಸೋಂಪು, ಮೆಣಸಿನ ಪುಡಿ, ಕೊತ್ತಂಬರಿಪುಡಿ, ಜೀರಿಗೆ ಪುಡಿ, ಗರಂ ಮಸಾಲ ಮತ್ತು ಉಪ್ಪು ಹಾಕಿ ಎರಡು ಸುತ್ತು ತಿರುಗಿಸಿಕೊಳ್ಳಬೇಕು. ನಂತರ ಬೆಂಡೆಕಾಯಿಯನ್ನು ಚೆನ್ನಾಗಿ ತೊಳೆದು ಒರೆಸಿ, ತೊಟ್ಟು ಮತ್ತು ಮುಂಬಾಗ ಕತ್ತರಿಸಿಕೊಳ್ಳಬೇಕು. ನಂತರ ಬೆಂಡೆಕಾಯಿಯ ಮದ್ಯ ಭಾಗದಲ್ಲಿ ಸ್ವಲ್ಪ ಕತ್ತರಿಸಿ ಜಾರಿನಲ್ಲಿ ಇರುವ ಮಿಶ್ರಣವನ್ನು ಅಲ್ಲಿ ತುಂಬಿಸಬೇಕು. ಈಗ ಒಲೆಯ ಮೇಲೆ ತವ ಇಟ್ಟು, ಬಿಸಿಯಾದ ನಂತರ ಎಣ್ಣೆ ಹಾಕಿ, ಎಣ್ಣೆ ಬಿಸಿಯಾದ ನಂತರ, ಸಿದ್ಧಪಡಿಸಿಟ್ಟುಕೊಂಡ ಬೆಂಡೆಕಾಯಿಗಳನ್ನು ಒಂದೊಂದಾಗಿ ಇಡಬೇಕು. ಅದಕ್ಕೆ ಒಂದು ಪಾತ್ರೆ ಮುಚ್ಚಿಟ್ಟು, ಸಣ್ಣ ಉರಿಯಲ್ಲಿ 5–6 ನಿಮಿಷ ಬೇಯಿಸಬೇಕು. ನಂತರ ಮಗುಚಿ ಹಾಕಿ ಮತ್ತೆ 5–6 ನಿಮಿಷ ಬೇಯಿಸಿದರೆ ರುಚಿಕರವಾದ ಬೆಂಡಿ ಪ್ರೈ ಸವಿಯಲು ಸಿದ್ದ.

# ಅಮೆರಿಕಕ್ಕೆ ಪಾಕ್ ಪ್ರಧಾನಿ ಮನವಿ



ಅಮೆರಿಕ : ಭಯೋತ್ಪಾದನೆಯಿಂದಾಗಿ ಜಾಗತಿಕವಾಗಿ ಮೂಲೆಗುಂಪಾಗುತ್ತಿರುವ ಪಾಕಿಸ್ತಾನ ಇದೀಗ ಭಾರತದ ಜೊತೆಗೆ ಶಾಂತಿ ಮರುಸ್ಥಾಪಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಹಾಯ ಬೇಡುತ್ತಿದೆ. ಈ ನಿಟ್ಟಿನಲ್ಲಿ ಅದು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ ಅಮೆರಿಕವು ಎರಡು ಅಣ್ವಸ್ತ್ರ ಹೊಂದಿದ ನೆರೆಹೊರೆ ದೇಶಗಳ ನಡುವೆ ವಿಸ್ತೃತ ಮಾತುಕತೆಗೆ ಸಹಾಯ ಮಾಡಬೇಕು" ಎಂದು ಮನವಿ ಮಾಡಿದರು.

# ವಿಶ್ವಸಂಸ್ಥೆ ಭದ್ರತಾ ಮಂಡಳಿಯ ನಿರ್ಣಯ ತಿರಸ್ಕರಿಸಿದ ಅಮೆರಿಕ

ವಿಶ್ವಸಂಸ್ಥೆ : ಗಾಜಾದಲ್ಲಿ ತಕ್ಷಣದ ಮತ್ತು ಶಾಶ್ವತ ಕದನ ವಿರಾಮಕ್ಕೆ ಒತ್ತಾಯಿಸುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವನ್ನು ಅಮೆರಿಕ ತಿರಸ್ಕರಿಸಿದೆ. ಕಾರಣ ಇದು ಒತ್ತೆಯಾಳುಗಳ ಬಿಡುಗಡೆಗೆ ಸಂಬಂಧಿಸಿಲ್ಲ, ಇದು ಹಮಾಸ್ ಉಗ್ರಗಾಮಿಗಳಿಗೆ ಧೈರ್ಯ ತುಂಬುವ ಕೆಲಸ ಎಂದು ಅಮೆರಿಕ ಹೇಳಿದೆ. ನಿರ್ಣಯದ ಪರವಾಗಿ ಮಂಡಳಿಯ 14 ಸದಸ್ಯರು ಮತಚಲಾಯಿಸಿದ್ದು, ಗಾಜಾದಲ್ಲಿ ಮಾನವೀಯ ಪರಿಸ್ಥಿತಿ ದುರಂತ ಎಂದಿದೆ.



ಹಾಗೇ ಆ ಪ್ರದೇಶದಲ್ಲಿರುವ 2.1 ಮಿಲಿಯನ್ ಪ್ಯಾಲೆಸ್ಟೈನಿಯನ್ನರಿಗೆ ನೆರವು ನೀಡುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕುವಂತೆ ಇಸ್ರೇಲ್‌ಗೆ ಕರೆ ನೀಡಿದೆ.


# ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗೆ ಭಾರತ ಆಯ್ಕೆ



ನವದೆಹಲಿ: ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗೆ ಎರಡು ವರ್ಷದ ಅವಧಿಗೆ ಭಾರತ ಆಯ್ಕೆಯಾಗಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ. 2026–28ರ ಅವಧಿಗೆ ಭಾರತ ಆಯ್ಕೆಯಾಗಿದ್ದು, ಅಭಿವೃದ್ಧಿ ಸಮಸ್ಯೆಗಳನ್ನು ಸಮರ್ಥಿಸಿಕೊಳ್ಳಲು ಮತ್ತು ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯನ್ನು ಬಲಪಡಿಸಲು ಕೆಲಸ ಮುಂದುವರಿಸಲು ಭಾರತ ಬದ್ಧವಾಗಿದೆ ಎಂದರು. ಭಾರತಕ್ಕೆ ಬೆಂಬಲಿಸಿ, ನಂಬಿಕೆಯಿಂದ ಆಯ್ಕೆ ಮಾಡಿದ್ದಕ್ಕಾಗಿ ವಿಶ್ವಸಂಸ್ಥೆಯ ಸದಸ್ಯ ದೇಶಗಳಿಗೂ ಧನ್ಯವಾದ ಅರ್ಪಿಸಿದರು. ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಮಿಷನ್ ಮಾಡಿದ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

# ಪಾಕಿಸ್ತಾನದ ಜೈಲಿನಿಂದ 200ಕ್ಕೂ ಅಧಿಕ ಕೈದಿಗಳು ಪರಾರಿ

ಪಾಕಿಸ್ತಾನ : ಪಾಕಿಸ್ತಾನದಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಕಳೆದ 24 ಗಂಟೆಯಲ್ಲಿ ಹಲವೆಡೆ ಭೂಕಂಪ ಸಂಭವಿಸಿದೆ. ಜೈಲಿನಲ್ಲಿದ್ದ ಕೈದಿಗಳ ರಕ್ಷಣೆಗಾಗಿ ಅವರನ್ನು ಬೇರೆಡೆ ಸ್ಥಳಾಂತರಿಸುವಾಗ 200ಕ್ಕೂ ಅಧಿಕ ಅಪರಾಧಿಗಳು ತಪ್ಪಿಸಿಕೊಂಡಿದ್ದಾರೆ. ಕರಾಚಿಯ ಮಾಲಿರ್ ಜೈಲಿನಲ್ಲಿ ಘಟನೆ ನಡೆದಿದೆ. ಕೈದಿಗಳು ಜೈಲಿನಿಂದ ತಪ್ಪಿಸಿಕೊಳ್ಳುವಾಗ ಒಬ್ಬ ಕೈದಿ ಸಾವನ್ನಪ್ಪಿದ್ದಾನೆ. ಅವರನ್ನು ತಡೆಯಲು ಮುಂದಾದ



ಮೂವರು ಪ್ಯಾರಾಮಿಲಿಟರಿ ಮತ್ತು ಒಬ್ಬ ಜೈಲು ಸಿಬ್ಬಂದಿ ತೀವ್ರ ಗಾಯಗೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

# ಅಮೇರಿಕಾದಲ್ಲಿ ಉಗ್ರ ದಾಳಿ: ಪ್ಯಾಲೆಸ್ಟೀನ್ ಪರ ಘೋಷಣೆ



ಬೌಲ್ಡರ್: ಪ್ಯಾಲೆಸ್ತೇನ್ ಪರ ಘೋಷಣೆ ಕೂಗತ್ತ ವ್ಯಕ್ತಿಯೊಬ್ಬ ಕೊಲೊರಾಡೋದ ಬೌಲ್ಡರ್‌ನಲ್ಲಿರುವ ಹೊರಾಂಗಣ ಮಾಲ್‌ನಲ್ಲಿ ಉದ್ದೇಶಿತ ಭಯೋತ್ಪಾದಕ ದಾಳಿ ನಡೆಸಿದ್ದಾನೆ ಎಂದು ಎಫ್‌ಬಿಐ ತಿಳಿಸಿದ್ದು, ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ. ಗಾಜಾದಲ್ಲಿರುವ ಇಸ್ರೇಲಿ ಒತ್ತೆಯಾಳುಗಳ ಕುರಿತು ಚರ್ಚಿಸಲು ಇಸ್ತೇಲ್ ಮೂಲದ ನಾಗರಿಕರು ಸಭೆ ಸೇರಿದ್ದ ವೇಳೆ ಈ ಘಟನೆ ನಡೆದಿದೆ. 45 ವರ್ಷದ ಮೊಹಮ್ಮದ್ ಸಬ್ರಿ ಸೋಲಿಮಾನ್ ಎಂಬ ವ್ಯಕ್ತಿ ಫ್ರೀ ಪ್ಯಾಲೆಸ್ತೇನ್ ಎಂದು ಕೂಗುತ್ತಾ ಪೆಟ್ರೋಲ್ ಬಾಂಬ್ ದಾಳಿ ನಡೆಸಿದ್ದು, ಆತನನ್ನು ವಶಕ್ಕೆ ಪಡೆಯಲಾಗಿದೆ.

# ಉಕ್ಕಿನ ಮೇಲಿನ ಆಮದು ಸುಂಕ ದ್ವಿಗುಣಗೊಳಿಸಿದ ಟ್ರಂಪ್

ಅಮೆರಿಕ: ಪೆನ್ಸಿಲ್ವೇನಿಯಾ ಉಕ್ಕಿನ ಉದ್ಯಮವನ್ನು ರಕ್ಷಿಸುವ ಉದ್ದೇಶದಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಕ್ಕಿನ ಮೇಲಿನ ಸುಂಕವನ್ನು ಶೇ 50ರಷ್ಟು ಏರಿಸುವುದಾಗಿ ಘೋಷಣೆ ಮಾಡಿದ್ದಾರೆ. ಪರಿಣಾಮವಾಗಿ ಇದೀಗ ಉಕ್ಕಿನ ಬೆಲೆಯಲ್ಲಿ ಹೆಚ್ಚಳ ಕಾಣಲಿದೆ. ತಮ್ಮ ಟ್ರೂತ್ ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಅಲ್ಯೂಮಿನಿಯಂ ಸುಂಕವನ್ನು ಶೇ.50ಕ್ಕೆ ಏರಿಸುವ ಮೂಲಕ ದ್ವಿಗುಣಗೊಳಿಸಲಾಗಿದೆ. ಈ



ಸುಂಕ ಹೆಚ್ಚಳವೂ ಬುಧವಾರದಿಂದ ಜಾರಿಗೆ ಬರಲಿದೆ ಎಂದು ಘೋಷಣೆ ಮಾಡಿದ್ದಾರೆ.

# ರಾಲೆಂಡ್ ಗ್ಯಾರೋಸ್ ಅಂಗಣದಲ್ಲಿ 99ನೇ ಗೆಲುವು ದಾಖಲಿಸಿದ ಜೊಕೊವಿಚ್



ಪ್ಯಾರಿಸ್: ದಾಖಲೆಯ 25ನೇ ಟ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಹುಡುಕಾಟದಲ್ಲಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್, ಪ್ರತಿಷ್ಠಿತ ಫ್ರೆಂಚ್ ಓಪನ್ ಟ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತಿಗೆ ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆರನೇ ಶ್ರೇಯಾಂಕಿತ ಜೊಕೊವಿಚ್ ಅವರು ಆಸ್ಟ್ರೀಯಾದ ಫಿಲಿಪ್ ಮಿಸೋಲಿಕ್ ವಿರುದ್ಧ 6–3, 6–4, 6–2ರ ನೇರ ಸೆಟ್‌ಗಳಲ್ಲಿ ಗೆದ್ದು ಪ್ರಿ–ಕ್ವಾರ್ಟರ್‌ಗೆ ಮುನ್ನಡೆದಿದ್ದಾರೆ. ಇದರೊಂದಿಗೆ ಮೂರು ಬಾರಿಯ ಚಾಂಪಿಯನ್ ಜೊಕೊವಿಚ್, ರಾಲೆಂಡ್ ಗ್ಯಾರೋಸ್ ಅಂಗಣದಲ್ಲಿ 99 ಗೆಲುವುಗಳ ಸಾಧನೆ ಮೆರೆದಿದ್ದಾರೆ.

# ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ 24 ಪದಕ ಗೆದ್ದ ಭಾರತ

ದಕ್ಷಿಣ ಕೊರಿಯಾ: ಭಾರತದ ಅಥ್ಲೀಟ್‌ಗಳು 26ನೇ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಒಟ್ಟು 24 ಪದಕಗಳೊಂದಿಗೆ 2 ನೇ ಸ್ಥಾನಕ್ಕೆ ತೃಪ್ತಿಪಟ್ಟು ಅಭಿಯಾನ ಮುಗಿಸಿದರು. ಕೂಟದ ಅಂತಿಮ ದಿನವಾದ ಶನಿವಾರ ಭಾರತ ಅಥ್ಲೀಟ್‌ಗಳು ಮೂರು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಕೊರಳಿಗೇರಿಸಿಕೊಂಡರು. ಈ ಕೂಟದಲ್ಲಿ ಭಾರತವು ಒಟ್ಟು 8 ಚಿನ್ನ, 10 ಬೆಳ್ಳಿ ಮತ್ತು 6 ಕಂಚಿನ ಪದಕ ಗಳಿಸಿತು. ಹೋದ ಸಲ ಭಾರತ ತಂಡವು 6 ಚಿನ್ನ ಗೆದ್ದಿತ್ತು. ಈ ಬಾರಿ ಎರಡು ಹೆಚ್ಚು ಬಂಗಾರ




ಪದಕಗಳು ಒಲಿದಿವೆ. ಆದರೆ ಒಟ್ಟು ಪದಕಗಳಿಕೆಯು ಹೋದ ಸಲಕ್ಕಿಂತ (27) ಕಡಿಮೆಯಾಗಿದೆ.

# ಮ್ಯೂಸಿಯಂ ಆಫ್ ಆರ್ಟ್ ಮತ್ತು ಫೋಟೋಗ್ರಾಫಿ ಪ್ರದರ್ಶನ



ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಬೆಂಗಳೂರಿನ ಮ್ಯೂಸಿಯಂ ಆಫ್ ಆರ್ಟ್ ಮತ್ತು ಫೋಟೋಗ್ರಾಫಿ ಜೊತೆಗೆ ಕೈಜೋಡಿಸಿ, ಟರ್ಮಿನಲ್ 2ರಲ್ಲಿ ಪ್ರಯಾಣಿಕರಿಗೆ ವಿಶಿಷ್ಟವಾದ ಸಾಂಸ್ಕೃತಿಕ ಅನುಭವವನ್ನು ನೀಡಲು ಮುಂದಾಗಿದೆ. ವಿಮಾನ ನಿಲ್ದಾಣವನ್ನು ಸಕ್ರಿಯ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸುವುದು, ಮತ್ತು ಪ್ರಯಾಣಿಕರಿಗೆ ದಕ್ಷಿಣಏಷ್ಯಾದ ಕಲಾ ಪರಂಪರೆ ಮತ್ತು ಸಂಸ್ಕೃತಿಯೊಂದಿಗೆ ಬೆರೆಯಲು ಅವಕಾಶವನ್ನು ನೀಡುವುದು ಈ ಸಹಭಾಗಿತ್ವದ ಉದ್ದೇಶವಾಗಿದೆ. ಟರ್ಮಿನಲ್ 2ರ ಪ್ರಮುಖ ಆಕರ್ಷಣೆ ಕಲೆಯಾಗಿದ್ದು, 210ಕ್ಕೂ ಹೆಚ್ಚು ಕಲಾಕೃತಿಗಳ ಸಂಗ್ರಹವನ್ನು ಹೊಂದಿದೆ.

# ನೈಋತ್ಯ ರೈಲ್ವೆಯಿಂದ ಎಟಿವಿಎಂ ಬಳಕೆ ಜಾರಿಗೆ


ಹುಬ್ಬಳ್ಳಿ: ಟಿಕೆಟ್ ಕೌಂಟರ್‌ಗಳಲ್ಲಿ ಜನದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ನೈಋತ್ಯ ರೈಲ್ವೆ ಎಟಿವಿಎಂ ಬಳಕೆಯನ್ನು ಜಾರಿಗೆ ತಂದಿದೆ. ಹುಬ್ಬಳ್ಳಿ ವಿಭಾಗದ ರೈಲು ನಿಲ್ದಾಣಗಳಲ್ಲಿ ಸ್ವಯಂಚಾಲಿತ ಟಿಕೆಟ್ ವಿತರಣಾ ಯಂತ್ರಗಳನ್ನು ಅಳವಡಿಸಲಾಗಿದೆ. ಭಾರತೀಯ ರೈಲ್ವೆಯ ಡಿಜಿಟಲ್ ಟಿಕೆಟ್ ವ್ಯವಸ್ಥೆಯ ಪ್ರೋತ್ಸಾಹದ



ಭಾಗವಾಗಿ ಎಟಿವಿಎಂ ಅಳವಡಿಸಿದ್ದು, ಪ್ರಸ್ತುತ ಹುಬ್ಬಳ್ಳಿ ರೈಲು ನಿಲ್ದಾಣದಲ್ಲಿ 8, ಬೆಳಗಾವಿ, ಬಳ್ಳಾರಿಯಲ್ಲಿ ತಲಾ 3, ಬಾಗಲಕೋಟೆ, ವಿಜಯಪುರ, ಗದಗ ಮತ್ತು ಹೊಸಪೇಟೆಯಲ್ಲಿ ತಲಾ 2, ಧಾರವಾಡ, ಕೊಪ್ಪಳ ಮತ್ತು ಘಟಪ್ರಭಾದಲ್ಲಿ ತಲಾ 1ರಂತೆ ಒಟ್ಟು 25 ಎಟಿವಿಎಂ ಕಾರ್ಯ ನಿರ್ವಹಿಸುತ್ತಿವೆ.

# ಕಮಲ್ ಹಾಸನ್‌ಗೆ ಹೈಕೋರ್ಟ್ ಚೀಮಾರಿ

ಬೆಂಗಳೂರು: 'ಥಗ್ ಲೈಫ್' ಸಿನಿಮಾ ಹಂಚಿಕೆ ಮತ್ತು ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ಕೋರಿ ರಾಜ್ ಕಮಲ್ ಫಿಲ್ಮ್ಸ್ ಇಂಟರ್ನ್ಯಾಷನಲ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ನಾರಾಯಣ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿದ್ದು, ನೆಲ ಜಲ ಭಾಷೆ ವಿಷಯದಲ್ಲಿ ರಾಜಿಯಾಗುವುದು ಸರಿಯಲ್ಲ. ನೀವೇನು ಭಾಷಾ ತಜ್ಞರೇ? ಮೊದಲು ಕ್ಷಮೆ ಕೇಳಿ ಎಂದು ಹೈ ಕೋರ್ಟು ತಿಳಿಸಿಸದೆ. ಕರ್ನಾಟಕ ಚಲಚನಚಿತ್ರ ವಾಣಿಜ್ಯ ಮಂಡಳಿಯು ಕಮಲ್ ಹಾಸನ್ ತಮ್ಮ ಹೇಳಿಕೆಗೆ ಕ್ಷಮೆ ಕೋರಬೇಕು ಎಂದು ತಿಳಿಸಿತ್ತು. ಇದಕ್ಕೆ ಕಮಲ್ ಹಾಸನ್ ಸ್ಪಷ್ಟನೆ ನೀಡಿ ಪತ್ರ ಬರೆದಿದ್ದಾರೆ.



# ಮಿಮ್ಸ್‌ನಲ್ಲಿ ಸಾವು ಆರೋಪ : ಸತ್ಯಾಸತ್ಯತೆ ಪರಿಶೀಲನೆಗೆ ತಜ್ಞರ ಸಮಿತಿ

ಮಂಡ್ಯ : ಮಳವಳ್ಳಿ ತಾಲೂಕು ನೆಲ್ಲೂರು ಗ್ರಾಮದ ಬಾಲಕಿ ಸಾನ್ವಿ (7) ವೈದ್ಯರ ನಿರ್ಲಕ್ಷ್ಯದಿಂದ ಮಿಮ್ಸ್ ಆಸ್ಪತ್ರೆಯಲ್ಲಿ ಸಾವಿಗೀಡಾದ್ದಳು ಎಂಬ ಆರೋಪ ಕೇಳಿಬಂದಿದೆ. ಬಾಲಕಿಯ ಸಾವಿಗೆ ಸಮರ್ಪಕವಾಗಿ ಚಿಕಿತ್ಸೆ ನೀಡದೆ ವೈದ್ಯರ ನಿರ್ಲಕ್ಷಿಸಿದ್ದಾರೆ ಎಂಬ ಗುರುತರವಾದ ಆರೋಪ ಬಂದಿರುವುದರಿಂದಾಗಿ ಸದರಿ



ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿ, ಸತ್ಯಾಸತ್ಯತೆಯನ್ನು ಪರಿಶೀಲಿಸುವ ಸಲುವಾಗಿ ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಿದೆ. ಸಮಿತಿಯು ಪ್ರಕರಣದ ತನಿಖೆ ನಡೆಸಿ, ತನಿಖಾ ವರದಿಯನ್ನು 15 ದಿನದೊಳಗಾಗಿ ತಪ್ಪದೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಸೂಚಿಸಿದ್ದಾರೆ.

# ದೇಶದ ಮೊದಲ ಸೌರಶಕ್ತಿ ಇವಿ ಚಾರ್ಜಿಂಗ್ ಕೇಂದ್ರ ಉದ್ಘಾಟನೆ



ದೇವನಹಳ್ಳಿ : ದೇಶದಲ್ಲಿ ಪ್ರಥಮ ಸೌರಶಕ್ತಿ ಸಂಯೋಜಿತ ಸೆಕೆಂಡ್ ಲೈಫ್ ಬ್ಯಾಟರಿ ಇವಿ ಚಾರ್ಜಿಂಗ್ ಕೇಂದ್ರ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಲೋಕಾರ್ಪಣೆಗೊಂಡಿತು. ದೇವನಹಳ್ಳಿಯ ಬೇಗೂರು ಕ್ರಾಸ್ ಬಳಿ ದೇಶದ ಮೊದಲ ಸೌರಶಕ್ತಿ ಇವಿಜಾರ್ಜಿಂಗ್ ಕೇಂದ್ರವನ್ನ ಇಂಧನ ಸಚಿವ ಕೆ.ಜೆ.ಜಾರ್ಜ್ ಮತ್ತು ಕಂದಾಯ ಸಚಿವ ಕೃಷ್ಣಬೈರೇಗೌಡ ಉದ್ಘಾಟಿಸಿದರು. ಬೆಸ್ಕಾಂ ಹಾಗೂ ಜರ್ಮನ್ ಕಾರ್ಪೊರೇಷನ್ ಫಾರ್ ಇಂಟರ್‌ನ್ಯಾಷನಲ್ ಕೋಆಪರೇಷನ್ ಸಹಭಾಗಿತ್ವದಲ್ಲಿ ದೇಶದ ಪ್ರಥಮ ಸೌರಶಕ್ತಿ ಸಂಯೋಜಿತ ಸೆಕೆಂಡ್ ಲೈಫ್ ಬ್ಯಾಟರಿ ಇವಿ ಚಾರ್ಜಿಂಗ್ ಕೇಂದ್ರವನ್ನು ಮಾಡಲಾಗಿದೆ.

# ಅತಿಥಿ ಶಿಕ್ಷಕರಿಂದ ಶಾಲೆ ತೊರೆದು ಪ್ರತಿಭಟನೆ

ಮೈಸೂರು: ರಾಜ್ಯ ಸರ್ಕಾರ ಕಳೆದ ಹಲವು ವರ್ಷಗಳಿಂದ ಸತತವಾಗಿ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಕನಿಷ್ಠ ಸೌಲಭ್ಯವನ್ನೂ ನೀಡದೇ ವಂಚಿಸುತ್ತಿದೆ. ಹೀಗಾಗಿ ಜೂನ್ 13ರಿಂದ ಅತಿಥಿ ಶಿಕ್ಷಕರು ಶಾಲೆ ತೊರೆದು ಪ್ರತಿಭಟಿಸಲಿದ್ದಾರೆ ಎಂದು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ



ಸಂಘದ ಖಜಾಂಚಿ ಹೆಚ್.ಎಸ್.ಸೌಮ್ಯ ಎಚ್ಚರಿಕೆ ನೀಡಿದರು. ಸೇವಾ ಪ್ರಮಾಣಪತ್ರ ಹಾಗೂ ಸೇವಾ ಭದ್ರತೆ ನೀಡುವುದು. ಗೌರವಧನ ಕನಿಷ್ಠ 25 ಸಾವಿರ ರೂ.ಗೆ ಹೆಚ್ಚಿಸುವುದು. ವಾರ್ಷಿಕ ಶೇ.5ರಷ್ಟು ಕೃಪಾಂಕ ನೀಡುವುದು.ಸೇವೆ ಖಾಯಂಗೊಳಿಸುವುದು ನಮ್ಮ ಬೇಡಿಕೆ ಎಂದರು.


# ಧಾರಣ ಸಾಮರ್ಥ್ಯದ ವರದಿ ನೀಡಲು ಸಚಿವ ಈಶ್ವರ ಖಂಡ್ರೆ ಸೂಚನೆ

ಬೆಂಗಳೂರು: ದಕ್ಷಿಣ ಕನ್ನಡ, ಕೊಡಗು ಮೊದಲಾದ ಭಾಗದಲ್ಲಿ ಮುಂಗಾರು ಪೂರ್ವ ಮಳೆಗೇ ಭೂಕುಸಿತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಪಶ್ಚಿಮಘಟ್ಟದ ಧಾರಣ ಸಾಮರ್ಥ್ಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ, ಪರಿಸರ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ. ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಲಿಖಿತ ಸೂಚನೆ ನೀಡಿರುವ ಅವರು, ಪಶ್ಚಿಮ ಘಟ್ಟದಲ್ಲಿ ಹಲವು ರಸ್ತೆ, ಮತ್ತಿತರ ಯೋಜನೆಗಳು ಕಾರ್ಯಗತವಾಗುತ್ತಿದ್ದು, ಇದರಿಂದ ಘಟ್ಟ ಅಪಾಯಕ್ಕೆ ಸಿಲುಕಿದೆ. ಆಸ್ತಿಹಾನಿ, ಬೆಳೆಹಾನಿ, ಜೀವಿಹಾನಿಯ ಜೊತೆಗೆ ವನ್ಯ ಜೀವಿಗಳೂ ಸಹ ಸಂಕಷ್ಟ ಎದುರಿಸುವಂತಾಗಿದೆ ಎಂದು ತಿಳಿಸಿದ್ದಾರೆ.



# ನಾಶವಾದ ಪಾಕಿಸ್ತಾನದ ಡ್ರೋನ್‌ಗಳ ಚಿತ್ರ ಬಿಡುಗಡೆ

ನವದೆಹಲಿ : ಭಾರತೀಯ ಸೇನಾ ಪಡೆಗಳು ನಡೆಸಿದ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನವು ಭಾರಿ ನಷ್ಟ ಅನುಭವಿಸಿದ ಬಗ್ಗೆ ಮಾಹಿತಿ ಹೊರಬಿದ್ದಿದೆ. ಪಾಕ್‌ನ 9 ವಿಮಾನಗಳು, 10ಕ್ಕೂ ಹೆಚ್ಚು ಆತ್ಮಹತ್ಯಾ ಡ್ರೋನ್‌ಗಳು, ಕ್ಷಿಪಣಿಗಳನ್ನು ಭಾರತೀಯ ಸೇನೆಯು ಹೊಡೆದು ಹಾಕಿದೆ



ಎಂದು ತಿಳಿದು ಬಂದಿದೆ. ಕಾರ್ಯಾಚರಣೆಯ ವೇಳೆ ಪಾಕಿಸ್ತಾನದ ವಾಯುಪಡೆಯ 6ಯುದ್ಧ ವಿಮಾನಗಳನ್ನು ಆಕಾಶದಲ್ಲೇ ಹೊಡೆ ದುರುಳಿಸಲಾಗಿದೆ. ಎರಡು ಇತರ ವಿಮಾನಗಳು, 1ಸಿ–130 ಸಾರಿಗೆ ವಿಮಾನ ನಾಶಪಡಿಸಲಾಗಿದೆ ಎಂದು ಭಾರತೀಯ ವಾಯುಪಡೆ ನೀಡಿದ ತಾಂತ್ರಿಕ ವಿಶ್ಲೇಷಣೆಯಲ್ಲಿ ಗೊತ್ತಾಗಿದೆ.

# ಜುಲೈ 21ರಿಂದ ಆಗಸ್ಟ್ 12ರವರೆಗೆ ಸಂಸತ್ ಮುಂಗಾರು ಅಧಿವೇಶನ



ನವದೆಹಲಿ: ಜುಲೈ 21 ರಿಂದ ಆಗಸ್ಟ್ 12ರವರೆಗೆ ಸಂಸತ್ ಮುಂಗಾರು ಅಧಿವೇಶನ ನಡೆಸಲು ಸಂಸದೀಯ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿಯು ಈ ನಿರ್ಧಾರ ತೆಗೆದುಕೊಂಡಿದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ತಿಳಿಸಿದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆಸಲಾದ ಸಮಿತಿಯನ್ನು ಈ ದಿನಾಂಕಗಳಿಗೆ ಶಿಫಾರಸು ಮಾಡಲಾಗಿದೆ ಎಂದರು. ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಪ್ರತಿಪಕ್ಷಗಳ ಒತ್ತಾಯಿಸಿದ್ದವು. ಈ ನಡುವೆಯೇ ಇದೀಗ ಮುಂಗಾರು ಅಧಿವೇಶನದ ದಿನಾಂಕದ ಘೋಷಣೆ ಹೊರ ಬಿದ್ದಿದೆ.

# 2 ವರ್ಷದ ಮಗುವನ್ನು ಹೊತ್ತೊಯ್ದ ನರಭಕ್ಷಕ ತೋಳ !

ಬಹ್ರೈಚ್: ಉತ್ತರ ಪ್ರದೇಶದ ಬಹ್ರೈಚ್ ಜಿಲ್ಲೆಯಲ್ಲಿ ಮತ್ತೆ ಕಾಡು ಪ್ರಾಣಿಗಳ ಭೀತಿ ಮತ್ತೆ ಆರಂಭವಾಗಿದೆ. ತಡರಾತ್ರಿ ಮನೆಯಲ್ಲಿ ತನ್ನ ತಾಯಿಯ ಪಕ್ಕದಲ್ಲಿ ಮಲಗಿದ್ದ 2 ವರ್ಷದ ಮಗುವನ್ನು ತೋಳವೊಂದು ಹೊತ್ತೊಯ್ದಿದೆ. ಮಗು ಇಲ್ಲದೇ ಇರುವುದನ್ನು ನೋಡಿದ ಕುಟುಂಬ ಸದಸ್ಯರು ತಡರಾತ್ರಿಯವರೆಗೆ



ಹುಡುಕಾಟ ನಡೆಸಿದ್ದರು. ಆದರೆ ಪತ್ತೆಯಾಗಿರಲಿಲ್ಲ. ಬೆಳಗ್ಗೆ ಕಬ್ಬಿನ ಹೊಲದಲ್ಲಿ ಮಗುವಿನ ಶವ ಛಿದ್ರಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೂರು ತೋಳಗಳು ಶವ ತಿನ್ನುತ್ತಿದ್ದವು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಮಗುವಿನ ಕಂಡ ನಂತರ ಕುಟುಂಬ ಸದಸ್ಯರು ಭಯಭೀತರಾಗಿದ್ದರು.

# ಅಗ್ನಿವೀರ್‌ಗಳಿಗೆ ಉ.ಪ್ರ.ಪೊಲೀಸ್ ಇಲಾಖೆ ನೇಮಕಾತಿಯಲ್ಲಿ ಮೀಸಲಾತಿ

ಉತ್ತರ ಪ್ರದೇಶ : ಅಗ್ನಿವೀರ್‌ಗಳಾಗಿ ಸೇನೆಯಲ್ಲಿ ಕಾರ್ಯನಿರ್ವಹಿಸಿದವರಿಗೆ ಉತ್ತರ ಪ್ರದೇಶ ಪೊಲೀಸ್ ಇಲಾಖೆ ನೇಮಕಾತಿಯಲ್ಲಿ ಶೇ 20ರಷ್ಟು ಮೀಸಲಾತಿ ನೀಡಲಿದೆ ಎಂದು ಉತ್ತರ ಪ್ರದೇಶ ಸಿಎಂ ಘೋಷಿಸಿದ್ದಾರೆ. ಈ ಕುರಿತು ಸಿಎಂ ಮಾತನಾಡಿ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ, ಅಗ್ನಿಪಥ್ ಯೋಜನೆಯಡಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ ಅಗ್ನಿವೀರ್‌ಗಳಿಗೆ ಪೊಲೀಸ್ ಇಲಾಖೆಯಲ್ಲಿ ಅವಕಾಶ ಒದಗಿಸುವ ಗುರಿ ಹೊಂದಿದ್ದೇವೆ ಎಂದರು. ಇದೊಂದು ಅರ್ಥಪೂರ್ಣ ನಿರ್ಧಾರ. ಈ ಮೀಸಲಾತಿ ಸಾಮಾನ್ಯ, ಪ.ಜಾ, ಪ.ಪಂ ಮತ್ತು ಓಬಿಸಿ ಸೇರಿದಂತೆ ಎಲ್ಲಾ ವರ್ಗಗಳಿಗೆ ಅನ್ವಯವಾಗುತ್ತದೆ.



# ಈಶಾನ್ಯ ರಾಜ್ಯಗಳಿಗೆ ಪ್ರಧಾನಿ ಮೋದಿಯಿಂದ ನೆರವಿನ ಭರವಸೆ

ಅಸ್ಸೋಂ : ಭಾರೀ ಮಳೆ ಮತ್ತು ಪ್ರವಾಹಕ್ಕೆ ತತ್ತರಿಸಿರುವ ಈಶಾನ್ಯ ರಾಜ್ಯಗಳಿಗೆ ಕೇಂದ್ರದಿಂದ ಸಂಪೂರ್ಣ ನೆರವು ಒದಗಿಸುವುದಾಗಿ ಪ್ರಧಾನಿ ನರೆಂದ್ರ ಮೋದಿ ಅಭಯ ನೀಡಿ



ದ್ದಾರೆ. ಅಸ್ಸೋಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರಿಗೆ ಕರೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಪ್ರವಾಹ ಪರಿಸ್ಥಿತಿ ಕುರಿತು ವಿವರ ಪಡೆದಿದ್ದಾರೆ.

ಕರಾವಳಿ ತರಂಗಿಣಿ

# ಕಲಾ ತರಂಗಿಣಿ

## ಗುರಿ ಟೀಸರ್ ಮತ್ತು ಹಾಡುಗಳ ಲೋಕಾರ್ಪಣೆ

80ರ ದಶಕದಲ್ಲಿ ಡಾ. ರಾಜ್‌ಕುಮಾರ್ ಅಭಿನಯಸಿದ್ದ ಗುರಿ ಚಿತ್ರವು ಸೂಪರ್ ಹಿಟ್ ಆಗಿತ್ತು. 4 ದಶಕದ ತರುವಾಯ ಇದೇ ಹೆಸರಿನಲ್ಲಿ ಸಿನಿಮಾವೊಂದು ಸದ್ದಿಲ್ಲದೆ ಸಿದ್ದಗೊಂಡಿದೆ. 'ನನ್ನ ಶಾಲೆಯನ್ನು ಪ್ರೀತಿಸುತ್ತೇನೆ' ಎಂಬ ಅಡಿಬರಹ ಇಂಗ್ಲೀಷ್‌ನಲ್ಲಿ ಹೇಳಿಕೊಂಡಿದೆ. ವಿಷ್ಣುದುರ್ಗಾ ಪ್ರೊಡಕ್ಷನ್ ಅಡಿಯಲ್ಲಿ ರಾಧಿಕಾ ಎಸ್. ಆರ್. ಮತ್ತು ಚಿತ್ರಲೇಖಾ ಎಸ್. ನಿರ್ಮಾಣ ಮಾಡಿರುವುದು ಹೊಸ ಅನುಭವ. ಸೆಲ್ವಂ ಮಾದಪ್ಪನ್ ಸಿನಿಮಾಕ್ಕೆ ಕಥೆ,ಚಿತ್ರಕತೆ, ಛಾಯಾಗ್ರಹಣ ಹಾಗೂ ನಿರ್ದೇಶನದ ಜವಬ್ದಾರಿ ಹೊತ್ತುಕೊಂಡಿದ್ದಾರೆ. ಲಹರಿವೇಲು ಸ್ಥಾಪನೆ ಮಾಡಿರುವ 'ಎಂಆರ್‌ಟಿ ಮ್ಯೂಸಿಕ್' ಆಡಿಯೋ ಹಕ್ಕುಗಳನ್ನು ಖರೀದಿಸಿದೆ. ಪ್ರಚಾರದ ಮೊದಲ ಹಂತವಾಗಿ ಪಳನಿ.ಡಿ. ಸೇನಾಪತಿ ಸಂಗೀತ ಸಂಯೋಜನೆಯ ಎರಡು ಹಾಡುಗಳು ಹಾಗೂ ಟೀಸರ್ ಅನಾವರಣ ಕಾರ್ಯಕ್ರಮವು ಎಂಎಂಬಿ ಲೆಗೆಸಿದಲ್ಲಿ ಅದ್ದೂರಿಯಾಗಿ ನಡೆಯಿತು. ಮುಖ್ಯಪಾತ್ರದಲ್ಲಿ ಅಭಿನಯಿಸಿರುವ ಚಿಣ್ಣರುಗಳಾದ ಮಹಾನಿಧಿ, ಜೀವಿತ್‌ಭೂಷಣ್ ಉಳಿದಂತೆ ಅಚ್ಯುತಕುಮಾರ್,ಜಯಶ್ರೀ, ಉಗ್ರಂಮಂಜು, ಸಂದೀಪ್‌ಮಲಾನಿ, ಮನೋಹರ್ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡರು.ನಿರ್ದೇಶಕ ಸೆಲ್ವಂಮಾದಪ್ಪನ್ ಮಾತನಾಡಿ ಸಿನಿ ಮಾವು ನೈಜ ಘಟನೆಯನ್ನು ಆಧರಿಸಿದೆ ಎಂದರು.




## ಸರ್ಕಾರಿ ಶಾಲೆಯ ಸುತ್ತ ಮಕ್ಕಳ ಚಿತ್ರ ತೆರೆಗೆ

ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿರುವ 'ಸ್ಕೂಲ್ ರಾಮಾಯಣ' ಚಿತ್ರ ತೆರೆಗೆ ಬರಲು ಸಿದ್ದವಾಗಿದೆ. ಈಗಾಗಲೇ ಪ್ರಾದೇಶಿಕ ಸೆನ್ಸಾರ್ ಮಂಡಳಿಯಿಂದ 'ಯು' ಪ್ರಮಾಣ ಪತ್ರವನ್ನು ಪಡೆದುಕೊಂಡಿರುವ 'ಸ್ಕೂಲ್ ರಾಮಾಯಣ' ಚಿತ್ರವನ್ನು ಇದೇ ಜೂನ್. 06ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ತಯಾರಿ ಮಾಡಿಕೊಂಡಿದೆ. 'ಸ್ಕೂಲ್ ರಾಮಾಯಣ' ಅಪ್ಪಟ ಗ್ರಾಮೀಣ ಸೊಗಡಿನ ಮಕ್ಕಳ ಚಿತ್ರ. ಹಳ್ಳಿಯೊಂದರ ಸರ್ಕಾರಿ ಶಾಲೆ ಮತ್ತು ಅಲ್ಲಿನ ಮಕ್ಕಳ ತುಂಟಾಟಗಳ ಸುತ್ತ ಇಡೀ ಚಿತ್ರದ ಕಥಾಹಂದರ ಸಾಗುತ್ತದೆ. ಸರ್ಕಾರ ನೀಡುವ ಮೂಲಭೂತ ಸೌಕರ್ಯಗಳನ್ನು ಬಳಕೆ ಮಾಡಿಕೊಳ್ಳಲು ಮತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಲು ಸರ್ಕಾರಿ ಶಾಲೆಗಳು ಏಕೆ ವಿಫಲವಾಗುತ್ತಿವೆ ಎಂಬ ವಿಷಯಗಳನ್ನು ಈ ಚಿತ್ರದಲ್ಲಿ ಚರ್ಚಿಸಲಾಗಿದೆ. ಇದರ ಜೊತೆಗೊಂದು ನವಿರಾದ ಪ್ರೇಮಕಥೆಯಿದ್ದು, ಪ್ರೇಕ್ಷಕರಿಗೆ 'ಸ್ಕೂಲ್ ರಾಮಾಯಣ' ಮಾಹಿತಿ ಜೊತೆಗೆ ಮನರಂಜನೆ ಕೂಡ ನೀಡಲಿದೆ ಎಂಬುದು ತಂಡದ ಮಾತು. 'ಸ್ಕೂಲ್ ರಾಮಾಯಣ' ಚಿತ್ರಕ್ಕೆ ಯುವನಿರ್ದೇಶಕ ವೇದ್ ಮತ್ತು ಸಂತೋಷ್ ಆರ್ಯ ಜಂಟಿಯಾಗಿ ನಿರ್ದೇಶನ ಮಾಡಿದ್ದಾರೆ. ಲೀಲಾವತಿ ಎನ್. ಹಸನಘಟ್ಟ, ಹರೀಶ್ ಕೆ.ಎಸ್. ಯೋಗೇಶ್ ಎನ್.ಟಿ.ಬಿ ಈ ಚಿತ್ರಕ್ಕೆ ಬಂಡವಾಳ ಹೂಡಿ ನಿರ್ಮಿಸಿದ್ದಾರೆ. ದೀಕ್ಷಿತ್ ಗೌಡ, ಸುಪ್ರೀತಾ ರಾಜ್, ಅಪೂರ್ವಾ, ಮೂಗು ಸುರೇಶ್, ಅಂಜನಪ್ಪ, ಕಿರಣ್ ಆರ್ಯ ಮೊದಲಾದವರು 'ಸ್ಕೂಲ್ ರಾಮಾಯಣ' ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಚಿತ್ರದ ಹಾಡುಗಳಿಗೆ ಕಾರ್ತಿಕ್ ವೆಂಕಟೇಶ್ ಸಂಗೀತ ಸಂಯೋಜಿಸಿದ್ದು, ಅಜಯ್ ವಾರಿಯರ್, ಮೆಹಬೂಬ್ ಸಾಬ್, ದೇವರಾಜ್ ಕುಂಬಾರ್, ಸಹನಾ ಮೊದಲಾದವರು ಹಾಡುಗಳಿಗೆ ಧ್ವನಿಯಾಗಿದ್ದಾರೆ.



## ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಬಿಡುಗಡೆ ದಿನಾಂಕ ಘೋಷಣೆ

ಪ್ಯಾನ್ ಇಂಡಿಯನ್ ಹೀರೋ ಪ್ರಭಾಸ್ ನಟನೆಯ 'ರಾಜಾ ಸಾಬ್' ಸಿನಿಮಾದಿಂದ ಬಿಗ್ ಅಪ್ಡೇಡ್ ಹೊರಬಿದ್ದಿದೆ. ಈಗಾಗಲೇ ಪೋಸ್ಟರ್ ಮತ್ತು ಝಲಕ್ ಮೂಲಕ ಗಮನ ಸೆಳದಿದ್ದ ಈ ಸಿನಿಮಾ, ಇದೀಗ ಬಿಡುಗಡೆಯ ಸುದ್ದಿಯ ಜತೆ ಆಗಮಿಸಿದೆ. ಅಂದರೆ, ಇದೇ ವರ್ಷದ ಡಿಸೆಂಬರ್ 5ರಂದು 'ದಿ ರಾಜಾ ಸಾಬ್' ಸಿನಿಮಾ ತೆರೆಗೆ ಬರಲಿದೆ. ಇದೇ ಜೂನ್ 16ರಂದು ಟೀಸರ್ ಸಹ ಬಿಡುಗಡೆ ಆಗಲಿದೆ. ಈವರೆಗೂ ಆಕ್ಷನ್ ಅವತಾರದಲ್ಲಿಯೇ ಹೆಚ್ಚು ಮಿಂಚಿದ್ದ ನಟ ಪ್ರಭಾಸ್, ಇದೇ ಮೊದಲ ಬಾರಿಗೆ 'ದಿ ರಾಜಾ ಸಾಬ್' ಸಿನಿಮಾ ಮೂಲಕ ಹಾರರ್ ಪ್ರಯತ್ನಕ್ಕಿಳಿದಿದ್ದಾರೆ. ಮೊದಲ ಮೋಷನ್ ಪೋಸ್ಟರ್ ನಲ್ಲಿಯೇ ಸೂಪರ್ ನ್ಯಾಚುರಲ್ ಎಳೆಯ ಹಿಂಟ್ ಕೊಟ್ಟಿದ್ದ ಈ ಸಿನಿಮಾ, ಇದೀಗ ಟೀಸರ್ ಬಿಡುಗಡೆ ದಿನಾಂಕದ ಜತೆಗೆ ಚಿತ್ರಮಂದಿರಕ್ಕೆ ಆಗಮಿಸುವುದಕ್ಕೂ ಮುಹೂರ್ತ ಫಿಕ್ಸ್ ಆಗಿದೆ. ಮಾರುತಿ ನಿರ್ದೇಶನದ 'ದಿ ರಾಜಾ ಸಾಬ್' ಭಯ ಮತ್ತು ಮನರಂಜನೆಯ ವಿಶಿಷ್ಟ ಮಿಶ್ರಣ ನೀಡುವ ಒಂದು ಪ್ರಯತ್ನ. ಬಿಡುಗಡೆಗೊಂಡಿರುವ ಪೋಸ್ಟರ್‌ಗಳು ಮತ್ತು ಝಲಕ್‌ಗಳು ಈಗಾಗಲೇ ಪ್ರೇಕ್ಷಕರನ್ನು ಆಶ್ಚರ್ಯ ಚಕಿತಗೊಳಿಸಿವೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ, ಟಿ.ಜಿ. ವಿಶ್ವಪ್ರಸಾದ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಈ ಚಿತ್ರ, ಬಿಗ್ ಬಜೆಟ್‌ನಲ್ಲಿ ಮೂಡಿಬರುತ್ತಿದೆ. ಈ ಚಿತ್ರಕ್ಕೆ ಕಾರ್ತಿಕ್ ಪಲನಿ ಛಾಯಾಗ್ರಹಣ ನಿರ್ವಹಿಸುತ್ತಿದ್ದು, ಥಮನ್ ಎಸ್. ಭರ್ಜರಿ ಸಂಗೀತ ನೀಡುತ್ತಿದ್ದಾರೆ.



## 'ಕುರುಡು ಕಾಂಚಾಣ' ಚಿತ್ರದ ಫಸ್ಟ್ ಲುಕ್ ಅನಾವರಣ

ವಿ.ಟಾಕೀಸ್ ಲಾಂಛನದಲ್ಲಿ ಅರುಣ್ ಕುಮಾರ್ ಜೆ ಹಾಗೂ ಡಾ॥ ಶ್ರೇಯಸ್ ಎಸ್ ನಿರ್ಮಿಸಿರುವ, ಕೆ.ಎಸ್. ಮಂಜುನಾಥ್ ರೆಡ್ಡಿ ಅವರ ಸಹ ನಿರ್ಮಾಣವಿರುವ ಹಾಗೂ ಸಂಗೀತ ನಿರ್ದೇಶಕನಾಗಿ ಹೆಸರು ಮಾಡಿರುವ ಎಸ್. ಪ್ರದೀಪ್ ವರ್ಮ ನಿರ್ದೇಶನದ "ಕುರುಡು ಕಾಂಚಾಣ" ಚಿತ್ರದ ಫಸ್ಟ್ ಲುಕ್ ಇತ್ತೀಚೆಗೆ ಬಿಡುಗಡೆ ಯಾಗಿದೆ. ನಟ, ನಿರ್ದೇಶಕ, ರಾಕ್ ಸ್ಟಾರ್ ರೋಹಿತ್ ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದ್ದಾರೆ. ಈಗಾಗಲೇ ಚಿತ್ರೀಕರಣ ಪೂರೈಸಿರುವ, ಶೀರ್ಷಿಕೆಯಲ್ಲೇ ಕುತೂಹಲ ಮೂಡಿಸಿರುವ 'ಕುರುಡು ಕಾಂಚಾಣ' ಚಿತ್ರ ತೆರೆಗೆ ಬರುವ ಹಂತದಲ್ಲಿದೆ. ಬೆಂಗಳೂರು, ಕುಣಿಗಲ್, ಚಿಕ್ಕಮಗಳೂರು, ವರ್ಕಳ ಹಾಗೂ ವೈನಾಡ್ ನಲ್ಲಿ ಚಿತ್ರೀಕರಣ ನಡೆದಿದೆ. ಥ್ರಿಲ್ಲರ್ ಕಥಾ ಹಂದರ ಹೊಂದಿರುವ ಈ ಚಿತ್ರದಲ್ಲಿ ಏಳು ಹಾಡುಗಳಿದ್ದು, ಎಚ್ ಗೀತಾ ಕೈವಾರ ಸಂಗೀತ ನೀಡಿದ್ದಾರೆ. ವಿ.ಮನೋ ಹರ್, ವರದರಾಜ್ ಚಿಕ್ಕಬಳ್ಳಾಪುರ, ಅರ್ಚನಾ ಮರವಂತೆ ಹಾಡುಗಳನ್ನು ಬರೆದಿದ್ದಾರೆ. ಹಿನ್ನೆಲೆ ಸಂಗೀತವನ್ನು ನಿರ್ದೇಶಕ ಪ್ರದೀಪ್ ವರ್ಮ ಅವರೆ ನೀಡಿದ್ದಾರೆ. ಪ್ರವೀಣ್‌ಶೆಟ್ಟಿ& ಗೌತಮ್ ಮಟ್ಟಿ ಛಾಯಾಗ್ರಹಣವಿರುವ ಈ ಚಿತ್ರದ ತಾರಾಬಳಗದಲ್ಲಿ ಕಿರಣ್ ರಾಜ್, ಎಸ್ ಪ್ರದೀಪ್ ವರ್ಮ, ಅಮೂಲ್ಯ ಗೌಡ, ಸಾಕ್ಷಿ ಮೇಘನಾ, ರೆಮೋ (ರೇಖಾ), ಮುಂತಾದವರಿದ್ದಾರೆ.



## 'ಮಾತೊಂದ ಹೇಳುವೆ' ಚಿತ್ರದ ಟ್ರೇಲರ್ ಬಿಡುಗಡೆ

ವಿಭಿನ್ನ ರೀತಿಯ ಪ್ರಚಾರ ತಂತ್ರಗಳ ಮೂಲಕ ಗಮನ ಸೆಳೆದಿರೋ ಮಯೂರ್ ಕಡಿ ನಿರ್ದೇಶನದ 'ಮಾತೊಂದ ಹೇಳುವೆ' ಚಿತ್ರದ ಟ್ರೇಲರ್ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿದೆ. ಬಿಡುಗಡೆಯಾದ ಕ್ಷಣದಿಂದಲೇ ಟ್ರೇಲರ್‌ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ಟ್ರೇಲರ್ ಬಿಡುಗಡೆಗೂ ಪೂರ್ವಭಾವಿಯಾಗಿ ಚಿತ್ರತಂಡ 'ಟ್ರೇಲರ್ ಡಿಕೋಡ್' ಸ್ಪರ್ಧೆ ಹೊರಬಿಟ್ಟಿತ್ತು. ಚಿತ್ರದ ನಾಯಕ ಮತ್ತು ನಾಯಕಿಯ ಡೈಲಾಗ್ ಮ್ಯೂಟ್ ಮಾಡಿ, ಜನರಿಗೆ ಡೈಲಾಗ್ ಊಹಿಸಲು ಈ ಸ್ಪರ್ಧೆ ಏರ್ಪಡಿಸಲಾಗಿತ್ತು. ಸರಿ ಉತ್ತರ ನೀಡಿದ ಮೊದಲ 5 ಜನರಿಗೆ ತಲಾ 5,000 ನಗದು ಬಹುಮಾನ ಎಂದು ಘೋಷಿಸಲಾಗಿತ್ತು. ಈಗ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.



## ತಿಮ್ಮನ ಮೊಟ್ಟೆಗಳು ಜೂನ್ 27ಕ್ಕೆ ತೆರೆಗೆ

ರಕ್ಷಿತ್ ತೀರ್ಥಹಳ್ಳಿಯವರ ಬರವಣಿಗೆ ಮತ್ತು ನಿರ್ದೇಶನದಲ್ಲಿ ಮೂಡಿಬರುತ್ತಿರುವ "ತಿಮ್ಮನ ಮೊಟ್ಟೆಗಳು" ಚಿತ್ರದ ಬಿಡುಗಡೆ ದಿನಾಂಕ ನಿಗದಿಯಾಗಿದ್ದು ಇದೇ ಜೂನ 27ಕ್ಕೆ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ. ವಾಸುಕಿ ವೈಭವ್ ಹಾಡಿರುವ "ಕಾಡು ದಾರಿ" ಎಂಬ ಹಾಡಿನ ಲಿರಿಕಲ್ ವಿಡಿಯೋ ಅನಾವರಣ ಮಾಡುವುದರೊಂದಿಗೆ ಚಿತ್ರತಂಡ ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಿಸಿದೆ. ಶ್ರೀಕೃಷ್ಣ ಪ್ರೊಡಕ್ಸನ್ಸ್ ಬ್ಯಾನರ್ ಅಡಿಯಲ್ಲಿ ಮೂಡಿ ಬರುತ್ತಿರುವ ಚೊಚ್ಚಲ ನಿರ್ಮಾಣಕ್ಕೆ ಆದರ್ಶ್ ಅಯ್ಯಂಗಾರ್ ಬಂಡವಾಳ ಹೂಡಿದ್ದಾರೆ. ರಕ್ಷಿತ್ ತೀರ್ಥಹಳ್ಳಿಯವರೇ ಬರೆದ "ಕಾಡಿನ ನೆಂಟರು" ಕಥಾ ಸಂಕಲನದಿಂದ ಆಯ್ದ ಕಥೆ ತಿಮ್ಮನ ಮೊಟ್ಟೆಗಳು ಸಿನಿಮಾವಾಗಿದೆ.



## ಜೂನ್ 20ರಂದು ತೆರೆಗೆ ಬರಲಿದೆ 'ಬುಲೆಟ್'

ತೆಲುಗು, ತಮಿಳು, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಅಭಿನಯಿಸಿರುವ ಸತ್ಯಜಿತ್ ಶಬ್ಬೀರ್ ನಿರ್ಮಿಸಿ, ನಿರ್ದೇಶಿಸಿರುವ ಹಾಗೂ ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿರುವ "ಬುಲೆಟ್" ಚಿತ್ರದ ಟೀಸರ್ ಹಾಗೂ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಬಹುಜನ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷರಾದ ಆರ್.ಎಂ.ಎನ್ ರಮೇಶ್ ಹಾಗೂ ನಟಿ ನಿಖಿತ ಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಟೀಸರ್ ಹಾಗೂ ಹಾಡುಗಳನ್ನು ಅನಾವರಣ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ನಾನು ಭಾರತಿರಾಜ ಅವರ ನಿರ್ದೇಶನದ "ಪದಿನಾರು ವಯದಿನಿಲೆ" ಚಿತ್ರದಲ್ಲಿ ಅಭಿನಯಿಸುವ ಮೂಲಕ ನಟನಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದೆ. ಈ ಚಿತ್ರದ ಸಂಗೀತ ನಿರ್ದೇಶಕರಾದ ಇಳಯರಾಜ ಅವರು ಶಬ್ಬೀರ್ ಅಂತ ಇದ್ದ ನನ್ನ ಹೆಸರಿನ ಮುಂದೆ ಸತ್ಯಜಿತ್ ಎಂದು ಸೇರಿಸಿದರು. ನಂತರ ನನ್ನ ಹೆಸರು ಸತ್ಯಜಿತ್ ಶಬ್ಬೀರ್ ಎಂದಾಯಿತು.



## 'ನಿದ್ರಾದೇವಿ Next Door' 'ಸ್ಲೀಪ್‌ಲೆಸ್ ಆಂಥೆಮ್' ಹಾಡು ರಿಲೀಸ್

ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ ದೇವಸಮುದ್ರ ನಿರ್ಮಿಸಿರುವ ಹಾಗೂ ಸುರಾಗ್ ನಿರ್ದೇಶನದ 'ನಿದ್ರಾದೇವಿ next door' ಚಿತ್ರದ 'ಸ್ಲೀಪ್ ಲೆಸ್ ಆಂಥೆಮ್' ಹಾಡನ್ನು ಇತ್ತೀಚೆಗೆ ದುನಿಯಾ ವಿಜಯ್ ಕುಮಾರ್ ಅವರು ಅನಾವರಣ ಮಾಡಿ, ಚಿತ್ರತಂಡಕ್ಕೆ ಶುಭ ಕೋರಿದ್ದರು. ಬಿಡುಗಡೆಯಾದ ಕ್ಷಣದಿಂದಲೇ ನಿದ್ದೆ ಬಾರದ ಹಾಡಿಗೆ ಮೆಚ್ಚುಗೆ ವ್ಯಕ್ತಿಯ ಪಜೀತಿಯ ಕುರಿತಾದ ಈ ಹಾಡಿಗೆ ಅಪಾರ ವ್ಯಕ್ತವಾಗುತ್ತಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. 'ಸರಿಗಮ' ದಲ್ಲೂ ಈ ಹಾಡು ಭಾರೀ ಟ್ರೆಂಡಿಂಗ್‌ನಲ್ಲಿದ್ದು, ಸಾಮಾಜಿಕ ಜಾಲತಾಣಗಳಲ್ಲೂ "ಸ್ಲೀಪ್ ಲೆಸ್ ಆಂಥೆಮ್" ಸಖತ್ ಸದ್ದು ಮಾಡುತ್ತಿದೆ. ಅಧಿಕ ಸಂಖ್ಯೆಯಲ್ಲಿ ಯುವಜನತೆ ಈ ಹಾಡಿಗೆ ಹುಕ್ ಸ್ಟೆಪ್ ಹಾಕುತ್ತಿರುವುದು ಹಾಡಿನ ಜನಪ್ರಿಯತೆಗೆ ಸಾಕ್ಷಿಯಾಗಿದೆ.Rap ಶೈಲಿಯ ಈ ಗೀತೆಗೆ ಗುಬ್ಬಿ ಮತ್ತು ಸೈಫ್ ಖಾನ್ ಸಾಹಿತ್ಯ ಬರೆದು ಹಾಡಿದ್ದಾರೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನವಿರುವ 'ಸ್ಲಿಪ್‌ಲೆಸ್ ಆಂಥೆಮ್" ಸಾಂಗ್‌ಗೆ ಪ್ರವೀರ್ ಶೆಟ್ಟಿ ಹೆಜ್ಜೆ ಹಾಕಿದ್ದಾರೆ. ಈ ಹಾಡಿಗೆ ನಿರ್ದೇಶಕ ಸುರಾಗ್ ಪತ್ನಿ ಸಹನ ರಾಮಸ್ವಾಮಿ ಸಹ ನಿರ್ದೇಶಕರಾಗಿ ಸಾಥ್ ಕೊಟ್ಟಿದ್ದಾರೆ.



## ಅಪ್ಪ-ಮಗನ ಬಾಂಧವ್ಯ ಗೀತೆ...ಚೌಕಿದಾರ್ ಮೊದಲ ಹಾಡು



ಚೌಕಿದಾರ್ ಅಪ್ಪ-ಮಗನ ಬಾಂಧವ್ಯದ ಹಾಡು ರಿಲೀಸ್.. ಚೌಕಿದಾರ್ ಸಿನಿಮಾ ತನ್ನ ಕಂಟೆಂಟ್ ಮೂಲಕ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿದೆ. ಇತ್ತೀಚೆಗೆ ಟೀಸರ್ ಮೂಲಕ ಗಮನಸೆಳೆದಿರುವ ಚಿತ್ರವೀಗ ಹಾಡಿನ ಮೂಲಕ ಸಿನಿರಸಿಕರಿಗೆ ಆಮಂತ್ರಣ ಕೊಟ್ಟಿದೆ. ಚೌಕಿದಾರ್ ಸಿನಿಮಾದ ಮೊದಲ ಹಾಡು MRT ಮ್ಯೂಸಿಕ್ ಯೂಟ್ಯೂಬ್‌ನಲ್ಲಿ ಅನಾವರಣಗೊಂಡಿದೆ. ಅಪ್ಪ ಮಗನ ಬಾಂಧವ್ಯದ ಗೀತೆಯಲ್ಲಿ ಸಾಯಿ ಕುಮಾರ್ ಹಾಗೂ ಪೃಥ್ವಿ ಅಂಬರ್ ತಂದೆ ಮಗನಾಗಿ ಕಾಣಿಸಿಕೊಂಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಪೋಣಿಸಿರುವ ಹಾಡಿಗೆ ಸಚಿನ್ ಬಸ್ರೂರ್ ಸಂಗೀತ, ವಿಜಯ್ ಪ್ರಕಾಶ್ ಅವರ ಧ್ವನಿ ಹಾಡಿನ ತೂಕ ಹೆಚ್ಚಿಸಿದೆ. ಅಪ್ಪ-ಮಗನ ಬಾಂಧವ್ಯದ ಚೌಕಿದಾರ್ ಸಿನಿಮಾದ ಹಾಡಿಗೆ ಭರಪೂರ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಶಾಲೆಯ ಶಿಕ್ಷಕರು, ಪ್ರಾಧ್ಯಾಪಕರು ಪತ್ರ ಬರೆದು ಅಭಿಪ್ರಾಯ ತಿಳಿಸುತ್ತಿದ್ದಾರೆ. ಅಪ್ಪ ಎಂಬ ಅಮೃತ ಬಿಂದು, ಕುಟುಂಬದ ಚೌಕಿದಾರ್ ಅಪ್ಪನನ್ನು ಎಲ್ಲರೂ ಸ್ಮರಿಸುತ್ತಿದ್ದಾರೆ. ಚೌಕಿದಾರ್ ಸಿನಿಮಾದಲ್ಲಿ ಸ್ಟಾರ್ ಕಾಸ್ಟ್ ತುಂಬಾನೇ ಚೆನ್ನಾಗಿದೆ.

## ಜೂನ್ 27ಕ್ಕೆ ಬಹು ನಿರೀಕ್ಷಿತ 'ಕಣ್ಣಪ್ಪ' ಚಿತ್ರ ಅದ್ದೂರಿ ಬಿಡುಗಡೆ

ಹ್ಯಾಟ್ರಿಕ್ ಹೀರೋ ಶಿವಣ್ಣನಿಂದ ಚಿತ್ರದ ಹಾಡೊಂದರ ಅನಾವರಣ. 1954ರಲ್ಲಿ ಡಾ.ರಾಜ್‌ಕುಮಾರ್ ಅಭಿನಯದಲ್ಲಿ ಬೇಡರ ಕಣ್ಣಪ್ಪ ತೆರೆಕಂಡಿತ್ತು. ಆನಂತರ 1988ರಲ್ಲಿ ಡಾ. ಶಿವರಾಜ್‌ಕುಮಾರ್ ಅಭಿನಯದಲ್ಲಿ "ಶಿವ ಮೆಚ್ಚಿದ ಕಣ್ಣಪ್ಪ" ಚಿತ್ರ ನಿರ್ಮಾಣವಾಯಿತು. ಆ ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಪರಮೇಶ್ವರನಾಗಿ ಕಾಣಿಸಿಕೊಂಡಿದ್ದರು. ಇದೀಗ 37 ವರ್ಷಗಳ ಬಳಿಕ ಮತ್ತೆ ಶಿವಭಕ್ತ ಕಣ್ಣಪ್ಪನ ಕಥೆ ಇಟ್ಟುಕೊಂಡು ಹೊಸ ನಿರೂಪಣೆಯೊಂದಿಗೆ "ಕಣ್ಣಪ್ಪ" ಎಂಬ ಚಿತ್ರ ಬಹು ಭಾಷೆಯಲ್ಲಿ ನಿರ್ಮಾಣವಾಗಿದೆ.






# ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಕ್ರೈಂ ಸಸ್ಪೆನ್ಸ್ "ಭೂ ಬಾಣ" ಚಿತ್ರದ ಮುಹೂರ್ತ..



ಕ್ರೈಂ, ಸಸ್ಪೆನ್ಸ್ ಕಥಾಹಂದರವಿರುವ 'ಭೂ ಬಾಣ' ಚಿತ್ರದ ಮುಹೂರ್ತ ಸಮಾರಂಭವು ಬಸವೇಶ್ವರ ನಗರದಲ್ಲಿರುವ ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಅದ್ದೂರಿಯಾಗಿ ನಡೆಯಿತು. ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರೆ, ಚಲನಚಿತ್ರ ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾದ ಜೆ.ಜಿ.ಕೃಷ್ಣ ಕ್ಯಾಮಾರ ಚಾಲನೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಎಸ್.ಕೆ.ಭಾಷಾ ಫಿಲಂಸ್ ಅಡಿಯಲ್ಲಿ ವಿಜಯವಾಡದ ಇಂಜಿನಿಯರ್ ಎಸ್.ಕೆ.ಫಿರೋಜ್ ಭಾಳ ಬಂಡವಾಳ ಹೂಡುವುದರ ಜತೆಗೆ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಎಸ್. ಆರ್. ಪ್ರಮೋದ್ ಕಥೆ, ಸಾಹಿತ್ಯ ರಚಿಸಿ ನಿರ್ದೇಶನ ಮಾಡುತ್ತಿದ್ದಾರೆ. ಇದು ಅವರ ಒಂಬತ್ತನೇ ಸಿನಿಮಾವಾಗಿದೆ. ಇದೇ ಸಂದರ್ಭದಲ್ಲಿ ಮಾತನಾಡಿದ ಎಸ್ ಆರ್ ಪ್ರಮೋದ್,



ಸಮಾಜದಲ್ಲಿ ಸಣ್ಣ ಸಣ್ಣ ವಿಷಯಕ್ಕೆ ಮನಸ್ತಾಪ ಬಂದು, ಒಂದು ಹಂತದಲ್ಲಿ ಕೊಲೆಯೊಂದಿಗೆ ಮುಕ್ತಾಯವಾಗುತ್ತದೆ. ಅದರಂತೆ ಚಿತ್ರದ ಕಥೆಯು ಹಳ್ಳಿಯಲ್ಲಿ ನಡೆಯುತ್ತದೆ. ಅಲ್ಲಿನ ದ್ವೇಷದ ಹಿನ್ನಲೆ, ಹಳೆಯ ವೈಷಮ್ಯದಿಂದ ಅಪರಾಧಗಳು ನಡೆಯುತ್ತದೆ. ಊರಿನ ಗೌಡರ ಮನೆಗಳಲ್ಲಿ ಮರ್ಡರ್‌ಗಳು ಆಗುತ್ತಿರುತ್ತವೆ. ಅವುಗಳನ್ನು ಮಾಡೋರು ಯಾರು? ಯಾವ ಕಾರಣಕ್ಕೆ? ಇದೆಲ್ಲಾವನ್ನು ಗೌಡರ ಮಗ ಅಪ್ಪನ ಸಾವಿನ ನಂತರ ಕೊಲೆಗಾರರನ್ನು ಭೇದಿಸಲು ಆರಂಭಿಸುತ್ತಾನೆ. ಈ ಹಾದಿಯಲ್ಲಿ ಆತನಿಗೆ ಎದುರಾಗುವ ಸವಾಲುಗಳು ಏನು? ಅದೆಲ್ಲಾವನ್ನು ಭೇದಿಸಿ ಹೇಗೆ ಗೆಲುವು ಸಾಧಿಸುತ್ತಾನೆ ಎಂಬುದು ಕಥಾ ಸಾರಾಂಶವಾಗಿದೆ. ಈ ಚಿತ್ರದಲ್ಲಿ ಎರಡು ಹಾಡುಗಳು ಮತ್ತು ಎರಡು ಸಾಹಸಗಳು ಇರಲಿದೆ. ಇಬ್ಬರು ಹಿರಿಯ ಕಲಾವಿದರು ನಟಿಸಲಿದ್ದಾರೆ ಎಂದು ತಿಳಿಸಿದರು.

# "ದಿ ಡೆವಿಲ್" ಮಾತಿನ ಭಾಗ ಚಿತ್ರೀಕರಣ ಮುಕ್ತಾಯ..

ಶ್ರೀ ಜೈ ಮಾತ ಕಂಬೈನ್ಸ್ ಲಾಂಛನದಲ್ಲಿ ಅದ್ದೂರಿಯಾಗಿ ನಿರ್ಮಾಣವಾಗುತ್ತಿರುವ, ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಹಾಗೂ ಚಾಲೆಂಜಿಂಗ್ ಸ್ಟಾರ್ ದರ್ಶನ್ ನಾಯಕರಾಗಿ ನಟಿಸುತ್ತಿರುವ "ದಿ ಡೆವಿಲ್" ಚಿತ್ರದ ಮಾತಿನ ಭಾಗದ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರು, ರಾಜಸ್ಥಾನ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಸದ್ಯದಲ್ಲೇ ಮಾತಿನ ಜೋಡಣೆ ಆರಂಭವಾಗಲಿದೆ. ಈಗಾಗಲೇ ಬಿಡುಗಡೆಯಾಗಿರುವ ಪೋಸ್ಟರ್‌ಗಳ ಮೂಲಕ ಎಲ್ಲರ ಗಮನ ಸೆಳೆದಿರುವ "ಡೆವಿಲ್" ಚಿತ್ರದ ಮತ್ತೊಂದು ವಿಭಿನ್ನ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಅಭಿಮಾನಿಗಳು ಚಿತ್ರ ಬಿಡುಗಡೆಗೆ ಕಾತುರದಿಂದ ಕಾಯುತ್ತಿದ್ದಾರೆ. ಸುಧಾಕರ್.ಎಸ್.ರಾಜ್ ಅವರ ಛಾಯಾಗ್ರಹಣವಿರುವ "ದಿ ಡೆವಿಲ್" ಚಿತ್ರಕ್ಕೆ ಬಿ. ಅಜನೀಶ್ ಲೋಕನಾಥ್ ಸಂಗೀತ ಮೋಹನ್ ಬಿ ಕೆರೆ ಕಲೆ, ರಾಮ್ ಲಕ್ಷ್ಮಣ್ ಅವರ ಸಾಹಸವಿದೆ.



# ಮೆಚ್ಚುಗೆ ಪಡೆದ "ಖೇಲಾ" ಚಿತ್ರದ ಹಾಡುಗಳು..

ಭರತ್ ಫಿಲಂಸ್ ಲಾಂಛನದಲ್ಲಿ ವಿ.ಜೆ.ಭರತ್ ಅವರು ನಿರ್ಮಿಸಿ, ನಿರ್ದೇಶಿಸುತ್ತಿರುವ "ಖೇಲಾ" ಚಿತ್ರದ ತಾಯಂದಿರ ದಿನದಂದು ಬಿಡುಗಡೆಯಾದ ತಾಯಿ–ಮಗನ ಬಾಂಧವ್ಯದ ಹಾಡು ಈಗಾಗಲೇ ಜನಪ್ರಿಯವಾಗಿದೆ. ಮತ್ತೆ ಬಿಡುಗಡೆಯಾಗಿರುವ "ಪುಣ್ಯಾತ್‌ಗಿತ್ತೀ" ಹಾಡು ಕೂಡ ಎಲ್ಲರ ಮೆಚ್ಚುಗೆ ಪಡೆಯುತ್ತಿದೆ. ನಮ್ಮ ಚಿತ್ರದಲ್ಲಿ ಐದು ಹಾಡುಗಳಿದ್ದು, ಈ ಹಾಡು ಸೇರಿದಂತೆ ಎರಡು ಹಾಡುಗಳನ್ನು ಪ್ರಮೋದ್ ಜೋಯಿಸ್ ಬರೆದಿದ್ದಾರೆ. ವೇಲ್ ಮುರುಗನ್ "ಪುಣ್ಯಾತ್‌ಗಿತ್ತೀ" ಹಾಡನ್ನು ಹಾಡಿದ್ದಾರೆ ಎಂದು ಹಾಡುಗಳ ಹಾಗೂ ಹಾಡಿರುವವರ ಬಗ್ಗೆ ಸಂಗೀತ ನಿರ್ದೇಶಕ ಎಂ.ಎಸ್.ತ್ಯಾಗರಾಜ್ ಮಾಹಿತಿ ನೀಡಿದರು. ನಾಯಕಿ ಆಶಿಕಾ ರಾವ್, ಪ್ರಮುಖ ಪಾತ್ರಧಾರಿ ಯುವರಾಜ್ ಗೌಡ, ಹಾಡು ಬರೆದಿರುವ ಪ್ರಮೋದ್ ಜೋಯಿಸ್ ಹಾಗೂ ಛಾಯಾಗ್ರಾಹಕ ಸ್ವಾಮಿ ಮೈಸೂರು ಚಿತ್ರದ ಕುರಿತು ಮಾಹಿತಿ ನೀಡಿದರು.











Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212